# ಶಿಕ್ಷಣ ಕ್ಷೇತ್ರದಲ್ಲಿ  ನಿಯಂತ್ರಣ ವ್ಯವಸ್ಥೆಗಳು

ಎಂ.ಆರ್.ಮಾಧವನ್ ಮತ್ತು ಕೌಶಿಕಿ ಸನ್ಯಾಲ್

ಭಾರತ ದೇಶವು ತನ್ನ ಜನಸಂಖ್ಯಾ ಲಾಭಾಂಶದ ಪ್ರಯೋಜನವನ್ನು ಪಡೆಯಬೇಕಾದರೆ ಉತ್ತಮ ಗುಣಮಟ್ಟದ ಶೈಕ್ಷಣಿಕ ವ್ಯವಸ್ಥೆಯನ್ನು ಸುಲಭಲಭ್ಯವಾಗಿಸುವುದು ನಿರ್ಣಾಯಕ ಅಂಶವಾಗುತ್ತದೆ. ಒಂದು ಸುಕ್ಷಿತ ಜನಸಮುದಾಯವು ಕೇವಲ ಆರ್ಥಿಕಾಭಿವೃದ್ಧಿಗೆ ಚುರುಕು ನೀಡುತ್ತದೆಯಷ್ಟೇ ಅಲ್ಲದೆ, ಆಯುರ್ನಿರೀಕ್ಷೆ, ಜನನಮರಣ ಪ್ರಮಾಣ, ಶಿಶುಮರಣ ಪ್ರಮಾಣ, ಮತ್ತು ಮಕ್ಕಳ  ಪೌಷ್ಟಿಕತೆಯ ಮಟ್ಟ ಮುಂತಾದ ಮಾನವಾಭಿವೃದ್ಧಿ ಸೂಚಕಗಳ ಮೇಲೆಯೂ ಸಕಾರಾತ್ಮಕ ಪ್ರಭಾವವನ್ನು ಬೀರುತ್ತದೆ. (Chakrabarty (ಚಕ್ರಬರ್ತಿ) 2011; GoI n.d., (ಭಾರತ ಸರ್ಕಾರ) 2012).  ಪ್ರಸ್ತುತ, ದೇಶದಲ್ಲಿ 7 ವರ್ಷಕ್ಕಿಂತ ಮೇಲ್ಪಟ್ಟ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ.74 ರಷ್ಟು ಅಕ್ಷರಸ್ಥರಿದ್ದಾರೆ (ಅಂದರೆ ಓದು, ಬರಹ ಎರಡೂ ಬಲ್ಲವರು): ಇದು 1951 ರಲ್ಲಿದ್ದ ಶೇ.18 ಕ್ಕಿಂತ ಗಣನೀಯ ಪ್ರಮಾಣದ ಸುಧಾರಣೆ.[1]  ಆದಾಗ್ಯೂ,  ಎಲ್ಲಾ ಹಂತಗಳಲ್ಲಿಯೂ ಕಳಪೆ ಗುಣಮಟ್ಟದ ಶಿಕ್ಷಣ, ಕಳಪೆ ಗುಣಮಟ್ಟದ ಸಂಶೋಧನೆ, ಅಸಮರ್ಪಕ ಮೂಲ ಸೌಕರ್ಯಗಳು, ಶಿಕ್ಷಕರ ನಿರಾಸಕ್ತಿ, ಕಳಪೆ ಗುಣಮಟ್ಟದ ತರಬೇತಿ, ಮತ್ತು ಸ್ವಾಯತ್ತತೆ ಹಾಗೂ ಉತ್ತರದಾಯಿತ್ವಗಳ ಅಭಾವ ಮುಂತಾದ ಹಲವು ಸವಾಲುಗಳನ್ನೂ ಈ ಕ್ಷೇತ್ರ ಎದುರಿಸುತ್ತಿದೆ.

ಈ ಅಧ್ಯಾಯದ ಮೊದಲ ಭಾಗವು ಪ್ರಚಲಿತ ಶೈಕ್ಷಣಿಕ ವ್ಯವಸ್ಥೆಯ ಸಂಕ್ಷಿಪ್ತವಾದ, ಸ್ಥೂಲ ಸಮೀಕ್ಷೆಯನ್ನು ನೀಡುತ್ತದೆ. ನಂತರದ ನಾಲ್ಕು ಭಾಗಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಮತ್ತು ಔದ್ಯೋಗಿಕ ಶಿಕ್ಷಣ — ಈ ಪ್ರತಿ ಹಂತದ ನಿಯಂತ್ರಣದ ಚೌಕಟ್ಟನ್ನು ವಿವರಿಸುತ್ತದೆ. ಪ್ರತಿಯೊಂದು ಭಾಗದಲ್ಲಿಯೂ ನಿಯಂತ್ರಣ ಸಂರಚನೆಯಲ್ಲಿ ಇತ್ತೀಚೆಗೆ ಮಾಡಿದ ಮತ್ತು ಮಾಡಲು ಉದ್ದೇಶಿಸಿರುವ ಕೆಲ ಬದಲಾವಣೆಗಳ ಬಗ್ಗೆಯೂ ಚರ್ಚಿಸಲಾಗುವುದು.

## ಪ್ರಸಕ್ತ ಸ್ಥಿತಿಗತಿ

ಭಾರತದ ಶೈಕ್ಷಣಿಕ ವ್ಯವಸ್ಥೆಯು ಸ್ಥೂಲವಾಗಿ ಶಾಲಾ ಶಿಕ್ಷಣ (ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ), ಉನ್ನತ ಶಿಕ್ಷಣ (ಸಾಮಾನ್ಯ ಮತ್ತು ವೃತ್ತಿಪರ) ಮತ್ತು ಔದ್ಯೋಗಿಕ ಶಿಕ್ಷಣವನ್ನು ಒಳಗೊಂಡಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (Ministry of Human Resource Development (MHRD))ವು ಶಿಕ್ಷಣ ಕ್ಷೇತ್ರದ ಕೇಂದ್ರೀಯ (Nodal) ಸಚಿವಾಲಯ. ಈ ಕ್ಷೇತ್ರಕ್ಕೆ ಸಂಬಂಧಿಸಿದ ಮಾನದಂಡಗಳ ನಿಯಂತ್ರಣ ಮತ್ತು ನಿರ್ವಹಣೆಯಲ್ಲಿ ಕೈಜೋಡಿಸಿರುವ ರಾಷ್ಟ್ರಮಟ್ಟದ ಇತರ ಅಂಗಸಂಸ್ಥೆಗಳೆಂದರೆ: ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಪರಿಷತ್ತು (National Council of Educational Research and Training (NCERT)), ವಿಶ್ವವಿದ್ಯಾಲಯ ಅನುದಾನ ಆಯೋಗ (University Grants Commission (UGC)), ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತು (All India Council of Technical Education (AICTE)) ಮತ್ತು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ತು (National Council for Teacher Education (NCTE)). ರಾಜ್ಯಗಳ ಮಟ್ಟದಲ್ಲಿ ಶಿಕ್ಷಣ ಇಲಾಖೆ ಹಾಗೂ ಆಯಾ ರಾಜ್ಯಗಳ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಪರಿಷತ್ತು (State Council of Educational Research and Training (SCERT))ಗಳು ಬಹುಮುಖ್ಯ ಪಾತ್ರಗಳನ್ನು ನಿರ್ವಹಿಸುತ್ತವೆ.

ಇಸವಿ 1992 ರಲ್ಲಿ ತಿದ್ದುಪಡಿ ಮಾಡಲಾದ 1986 ರ ರಾಷ್ಟ್ರೀಯ ಶಿಕ್ಷಣ ನೀತಿ (National Policy on Education (NEP)) ಯು ಪ್ರಾದೇಶಿಕ ಮತ್ತು ಸಾಮಾಜಿಕ ಅಸಮತೋಲನಗಳನ್ನು ಸರಿಪಡಿಸಿ, ಮಹಿಳೆಯರು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು (SC/STs) ಮತ್ತು ಅಲ್ಪಸಂಖ್ಯಾತರಿಗೆ ಶಿಕ್ಷಣ ದೊರೆಯಬೇಕೆನ್ನುವುದನ್ನು ಒತ್ತಿ ಹೇಳಿತು. ಇದು ಶಿಕ್ಷಣದ ಸಾರ್ವತ್ರಿಕ ಪ್ರವೇಶಾವಕಾಶ ಮತ್ತು ಉಳಿಸಿಕೊಳ್ಳುವ ಸಾಮರ್ಥ್ಯಕ್ಕೆ ಪ್ರಾಧಾನ್ಯ ನೀಡಿತು. ಶಿಕ್ಷಣಕ್ಕಾಗಿ ಮಾಡುವ ವೆಚ್ಚವನ್ನು ಒಟ್ಟು ರಾಷ್ಟ್ರೀಯ ಉತ್ಪನ್ನದ (GDP) ಶೇ.6 ರಷ್ಟಕ್ಕೆ ಏರಿಸುವ ಗುರಿಯನ್ನು ಸಹ ನಿಗದಿ ಮಾಡಿತು. ಭಾರತವು ತನ್ನ ಒಟ್ಟು ಮೊತ್ತದ ವಾರ್ಷಿಕ ಆಯವ್ಯಯ ಮುಂಗಡ ಪತ್ರದ ಸುಮಾರು ಶೇ.11.5 ರಷ್ಟನ್ನು ಶಿಕ್ಷಣಕ್ಕಾಗಿ ವೆಚ್ಚ ಮಾಡುತ್ತದೆ. (GoI 2012). 2011-12 ರ ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇಕಡಾವಾರು ಲೆಕ್ಕದಲ್ಲಿ ಶಿಕ್ಷಣಕ್ಕಾಗಿ ಮಾಡಿದ ವೆಚ್ಚವು ಶೇ.3.1 ಆಗಿತ್ತು.[2]

ಶಿಕ್ಷಣ ಕ್ಷೇತ್ರದ ಎಲ್ಲ ಹಂತಗಳಲ್ಲಿಯೂ ಖಾಸಗಿ ಸಹಭಾಗಿತ್ವಕ್ಕೆ ಅವಕಾಶ ನೀಡಲಾಗಿದೆಯಾದರೂ ಖಾಸಗಿ ಶಿಕ್ಷಣ ಸಂಸ್ಥೆಗಳು ಎಲ್ಲ ಹಂತಗಳಲ್ಲಿಯೂ ಲಾಭರಹಿತವಾಗಿಯೇ ಕಾರ್ಯ ನಿರ್ವಹಿಸಬೇಕಾಗುತ್ತದೆ.[3] 'ಸೌಕರ್ಯಗಳ ವಿಸ್ತರಣೆ ಮತ್ತು ಅವುಗಳ ಹೆಚ್ಚಳಕ್ಕಾಗಿ ಮಾಡುವ ವೆಚ್ಚವನ್ನು ಭರಿಸುವ ಸಲುವಾಗಿ ಸೂಕ್ತ ಅಧಿಕ ಮೊತ್ತವನ್ನು ಹೊಂದಲು' ಸರ್ವೋಚ್ಚ ನ್ಯಾಯಾಲಯದ ಆದೇಶವು ಈ ಸಂಸ್ಥೆಗಳಿಗೆ ಅನುಮತಿ ನೀಡಿದೆ[4]; ಆದರೂ ಕ್ಯಾಪಿಟೇಷನ್ ಶುಲ್ಕ ವಿಧಿಸುವುದನ್ನು ಅಥವಾ ಲಾಭ ಗಳಿಸುವುದನ್ನು ನಿಷೇಧಿಸಲಾಗಿದೆ (ಈ ತೀರ್ಪು 'ಸೂಕ್ತ ಅಧಿಕ ಮೊತ್ತ' ದ ವ್ಯಾಖ್ಯೆ ನೀಡುವುದಿಲ್ಲ) (ibid (ಅದೇ).: 87). [5]

ಪ್ರಾಥಮಿಕ ಹಂತದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣವು ಗಮನಾರ್ಹವಾಗಿ ಪ್ರಗತಿ ಸಾಧಿಸಿದ್ದರೂ, ಉನ್ನತ ಹಂತಗಳಲ್ಲಿ ತೀವ್ರವಾಗಿ ಕುಸಿಯುತ್ತದೆ. ಒಟ್ಟು ದಾಖಲಾತಿ ಪ್ರಮಾಣವು (Gross Enrolment Ratio (GER)) ಪ್ರಾಥಮಿಕ ಹಂತದಲ್ಲಿ ಶೇ.102 ರಷ್ಟಿದ್ದರೆ ಮಾಧ್ಯಮಿಕ ಹಂತದಲ್ಲಿ ಶೇ.63, ಪ್ರೌಢ ಹಂತದಲ್ಲಿ ಶೇ.36, ಮತ್ತು ಉನ್ನತ ಹಂತದಲ್ಲಿ ಶೇ.15 ರಷ್ಟಿದೆ (MHRD 2011d).[6]

ಇತ್ತೀಚೆಗಿನ ಸಂಸದೀಯ ಕಾರ್ಯಕಲಾಪವು ಶಿಕ್ಷಣದ ಪ್ರಾಥಮಿಕ ಮತ್ತು ಉನ್ನತ ಹಂತಗಳ ಮೇಲಷ್ಟೇ ತನ್ನ ಗಮನವನ್ನು ಕೇಂದ್ರೀಕರಿಸಿತ್ತೇ ಹೊರತು ಮಾಧ್ಯಮಿಕ ಹಂತದ ಮೇಲಲ್ಲ. ಎಂಟನೇ ತರಗತಿಯವರೆಗಿನ ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಕಾರ್ಯರೂಪಕ್ಕೆ ತರುವಂತಹ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯ್ದೆ, 2009 (Right to Education RTE)) ಯನ್ನು ಸಂಸತ್ತು ಅಂಗೀಕರಿಸಿದೆ. ಪ್ರಸ್ತುತ (ವಿಶ್ವವಿದ್ಯಾಲಯದ ಹಂತದಲ್ಲಿ) ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ನಿಯಂತ್ರಣಾ ರೂಪುರೇಷೆಗಳಲ್ಲಿ ಸುಧಾರಣೆ ತರುವುದಕ್ಕಾಗಿ ಹಲವಾರು ಮಸೂದೆಗಳನ್ನು ಪರಿಶೀಲಿಸಲಾಗುತ್ತಿದೆ.

## ಪ್ರಾಥಮಿಕ ಶಿಕ್ಷಣ

ಪ್ರಾಥಮಿಕ ಶಿಕ್ಷಣವನ್ನು ನೀಡುವ ಹಲವಾರು ಬಗೆಯ ಶಾಲೆಗಳಿವೆ:

(a) ಸರ್ಕಾರಿ / ಸರ್ಕಾರದಿಂದ ಅನುದಾನ ಪಡೆಯುವ ಶಾಲೆಗಳು
(b) ಸರ್ಕಾರದ ಅಧೀನದಲ್ಲಿ ಸ್ವಾಯತ್ತ ಸಂಸ್ಥೆಗಳು ನಡೆಸುವ ಶಾಲೆಗಳು (ಕೇಂದ್ರೀಯ ವಿದ್ಯಾಲಯ ಮತ್ತು ನವೋದಯ ವಿದ್ಯಾಲಯಗಳ ರೀತಿಯವು)

(c) ಸರ್ಕಾರಿ ಇಲಾಖೆಗಳು ಸ್ವತಃ ನಡೆಸುವ ಶಾಲೆಗಳು (ರಕ್ಷಣಾ ಇಲಾಖೆ ಮತ್ತು ರೈಲ್ವೇ ಇಲಾಖೆಗಳು ನಡೆಸುವಂತಹವು)

(d) ಸಾರ್ವಜನಿಕ ಉದ್ದಿಮೆಗಳು ನಡೆಸುವ ಶಾಲೆಗಳು, ಮತ್ತು

(e) ಅನುದಾನರಹಿತ ಶಾಲೆಗಳು (ಖಾಸಗಿ).

ಸರ್ಕಾರಿ ಶಾಲೆಗಳು ಕೇಂದ್ರ, ರಾಜ್ಯ ಅಥವಾ ಸ್ಥಳೀಯ ಸರ್ಕಾರಗಳಿಂದ ನಡೆಸಲ್ಪಡುತ್ತವೆ. ಅನುದಾನಿತ ಶಾಲೆಗಳು ಖಾಸಗಿಯವರಿಂದ ನಿರ್ವಹಿಸಲ್ಪಡುತ್ತವೆ; ಆದರೆ ಅವು ಕೇಂದ್ರ, ರಾಜ್ಯ ಅಥವಾ ಸ್ಥಳೀಯ ಸರ್ಕಾರಗಳಿಂದ ಅನುದಾನ ಸಹಾಯವನ್ನು ಪಡೆಯುತ್ತವೆ. ಅನುದಾನರಹಿತ (ಖಾಸಗಿ) ಶಾಲೆಗಳು ವಿಶ್ವಸ್ಥ ಮಂಡಳಿಗಳು, ಅಥವಾ ಶೈಕ್ಷಣಿಕ, ಧರ್ಮಾರ್ಥ ಅಥವಾ ಧಾರ್ಮಿಕ ಸಂಸ್ಥೆಗಳಿಂದ ಸ್ಥಾಪಿತವಾದ ಲಾಭರಹಿತ ಘಟಕಗಳು; ಸಂಘಗಳ ನೋಂದಣಿ ಕಾಯ್ದೆ, 1860 ಅಥವಾ ಸಂಬಂಧಿತ ರಾಜ್ಯ ಕಾಯ್ದೆಗಳ ಅಡಿಯಲ್ಲಿ ಈ ಸಂಸ್ಥೆಗಳು ನೋಂದಾಯಿಸಲಾಗಿರುತ್ತವೆ.[7]

'ಶಿಕ್ಷಣ' ವು ಸಂವಿಧಾನದ ಸಮವರ್ತಿ-ಪಟ್ಟಿಯ ವಿಷಯವಾಗಿದ್ದು ಅಗತ್ಯ ಕಾನೂನುಗಳನ್ನು ರಚಿಸಲು ಕೇಂದ್ರ ಹಾಗೂ ರಾಜ್ಯಗಳಿಗೆ ಅವಕಾಶ ನೀಡುತ್ತದೆ. 2002ಕ್ಕಿಂತ ಮೊದಲೇ, ಸಂವಿಧಾನದ ರಾಜ್ಯನೀತಿಯ ನಿರ್ದೇಶಕ ತತ್ವಗಳ ಅನುಚ್ಛೇದ 45 ರಲ್ಲಿ 'ಸಂವಿಧಾನವು ಅನುಷ್ಠಾನಕ್ಕೆ ಬಂದ 10 ವರ್ಷ ಅವಧಿಯ ಒಳಗೆ ಎಲ್ಲಾ ಮಕ್ಕಳಿಗೆ, ಅವರು 14 ವರ್ಷ ವಯಸ್ಸು ದಾಟುವವರೆಗೆ, ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವಂತೆ' ರಾಜ್ಯವ್ಯವಸ್ಥೆಗೆ ಆದೇಶಿಸಲಾಗಿದೆ.[8] ಹಲವು ರಾಜ್ಯಗಳು ಶಿಕ್ಷಣವನ್ನು ಉಚಿತ ಮತ್ತು ಕಡ್ಡಾಯ ಮಾಡಲು ಕಾಯ್ದೆಗಳನ್ನು ರೂಪಿಸಿವೆ. ಉದಾಹರಣೆಗೆ, ದೆಹಲಿ ಪ್ರಾಥಮಿಕ ಶಿಕ್ಷಣ ಕಾಯ್ದೆ, 1970; ಗುಜರಾತ್ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆ, 1961; ಮತ್ತು ತಮಿಳುನಾಡು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆ, 1994 (Juneja (ಜುನೇಜಾ) 2003), ಇವುಗಳನ್ನು ಗಮನಿಸಬಹುದು. ವರ್ಷಗಳು ಕಳೆದಂತೆ ದಾಖಲಾತಿ ಪ್ರಮಾಣ ಉತ್ತಮಗೊಂಡಿತ್ತಾದರೂ ಶಾಲೆಯನ್ನು ತೊರೆದವರ ಪ್ರಮಾಣ ಅಧಿಕವಾಗಿತ್ತು. 2002-03 ರಲ್ಲಿ 6-14 ವರ್ಷ ವಯಸ್ಸಿನ ಮಕ್ಕಳ ಒಟ್ಟು ದಾಖಲಾತಿ ಪ್ರಮಾಣವು (GER) ಶೇ.82.5 ರಷ್ಟಿತ್ತು. ಪ್ರಾಥಮಿಕ ಹಂತದ ಶಿಕ್ಷಣ ಮುಗಿಸಲಾಗದ ಮಕ್ಕಳ ಪ್ರಮಾಣ ಶೇ.35 ರಷ್ಟಿತ್ತು (Planning Commission (ಪ್ಲಾನಿಂಗ್ ಕಮಿಷನ್) 2008a).

1993 ರಲ್ಲಿ, ಜೀವಿಸುವ ಹಕ್ಕಿನ ಅಂತರ್ಗತ ಭಾಗವಾಗಿರುವ ಕಾರಣದಿಂದ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕೆಂದು ಸರ್ವೋಚ್ಛ ನ್ಯಾಯಾಲಯವು ಘೋಷಿಸಿತು. 2002 ರಲ್ಲಿ ಈ ಹಕ್ಕನ್ನು ಒಳಗೊಳ್ಳುವಂತೆ ಸಂವಿಧಾನಕ್ಕೆ ತಿದ್ದುಪಡಿ ಮಾಡಲಾಯಿತು ಮತ್ತು 21A ಅನುಚ್ಛೇದವನ್ನು ಸೇರಿಸಲಾಯಿತು; ಇದು 6 ರಿಂದ 14 ವರ್ಷ ವಯಸ್ಸಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವಂತೆ ರಾಜ್ಯವ್ಯವಸ್ಥೆಗೆ ಆದೇಶಿಸುತ್ತದೆ. 2010 ರ ಏಪ್ರಿಲ್ ನಲ್ಲಿ ಕಾರ್ಯರೂಪಕ್ಕೆ ಬಂದ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯ್ದೆ (RTE)ಯಿಂದಾಗಿ ಈ ಮೂಲಭೂತ ಹಕ್ಕು ಜಾರಿಗೆ ಬಂದಂತಾಯಿತು.

**ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯಿದೆ, 2009**

ಈ ಕಾಯಿದೆಯು 6 ರಿಂದ 14 ವರ್ಷಗಳವರೆಗಿನ ಎಲ್ಲಾ ಮಕ್ಕಳಿಗೆ (ಅಂಗವಿಕಲ ಮಕ್ಕಳನ್ನೂ ಒಳಗೊಂಡಂತೆ) ಶಿಕ್ಷಣದ ಮೂಲಭೂತ ಹಕ್ಕನ್ನು ಕಾರ್ಯರೂಪಕ್ಕೆ ತರುವ ಉದ್ದೇಶ ಹೊಂದಿದೆ. 8 ಏಪ್ರಿಲ್ 2010 ರಂದು ಕೇಂದ್ರದ RTEಯ ನಿಬಂಧನೆಗಳ ಅಧಿಸೂಚನೆಯನ್ನು ಪ್ರಕಟಿಸಲಾಯಿತು. ಇಲ್ಲಿಯವರೆಗೆ ಗುಜರಾತ್, ಆಂಧ್ರ ಪ್ರದೇಶ, ಹಿಮಾಚಲ್ ಪ್ರದೇಶ್, ಒರಿಸ್ಸಾ, ರಾಜಸ್ಥಾನ, ಪಂಜಾಬ್, ಹರಿಯಾಣ ಮತ್ತು ಮಣಿಪುರ ಸೇರಿದಂತೆ 32 ರಾಜ್ಯಗಳು ತಮ್ಮ ರಾಜ್ಯಗಳ RTE ನಿಬಂಧನೆಗಳನ್ನು ಪ್ರಕಟಿಸಿವೆ (PIB 2012b ). ಸರ್ಕಾರವು ಈ ಕಾಯ್ದೆಯನ್ನು ಜಾರಿಗೆ ತರಲು 2010-11 ರಿಂದ 2014-15 ವರೆಗಿನ ಐದು ವರ್ಷಗಳ ಅವಧಿಯಲ್ಲಿ ರೂ. 2.3 ಲಕ್ಷ ಕೋಟಿ (trillion)ಗಳನ್ನು ವೆಚ್ಚ ಮಾಡಲು ಬದ್ಧವಾಗಿದೆ. ಈ ಐದು ವರ್ಷಗಳವರೆಗೆ ಕೇಂದ್ರ ಮತ್ತು ರಾಜ್ಯಗಳ ನಡುವಿನ ನಿಧಿ ಹಂಚಿಕೆಯ ಮಾದರಿಯು 65:35 ಅನುಪಾತದಲ್ಲಿರುವುದು (PIB 2011).

**ಚೌಕಟ್ಟು 1.1**

**ಸರ್ವೋಚ್ಚ ನ್ಯಾಯಾಲಯದಲ್ಲಿ ಶಿಕ್ಷಣದ ಹಕ್ಕನ್ನು ಕುರಿತ ಕಾನೂನು ಪ್ರಕ್ರಿಯಾಸರಣಿ**

**ಮೋಹಿನಿ ಜೈನ್ v. ಕರ್ನಾಟಕ ರಾಜ್ಯ (1992)SCR(3)658:** ದೇಶದ ಪ್ರತಿಯೊಬ್ಬ ನಾಗರಿಕನೂ ಸಂವಿಧಾನದತ್ತವಾಗಿ 'ಶಿಕ್ಷಣದ ಹಕ್ಕನ್ನು' ಹೊಂದಿದ್ದಾನೆ. ಅದು ರಾಜ್ಯನೀತಿಯ ನಿರ್ದೇಶಕ ತತ್ವಗಳಲ್ಲಿ ಅಡಕವಾಗಿದ್ದರೂ, ಈ ಹಕ್ಕನ್ನು ಯಥಾರ್ಥಗೊಳಿಸದ ಹೊರತು ಮೂಲಭೂತ ಹಕ್ಕುಗಳು ಬಹುತೇಕ ಜನರ ಪಾಲಿಗೆ ದಕ್ಕದೆ ಹೋಗುತ್ತವೆ. ಸರ್ಕಾರಿ ಸ್ವಾಮ್ಯದ ಅಥವಾ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ಮೂಲಕ ಈ ಹಕ್ಕನ್ನು ಒದಗಿಸುವ ಹೊಣೆಯನ್ನು ರಾಜ್ಯವ್ಯವಸ್ಥೆಯು ಹೊರಬೇಕಾಗುತ್ತದೆ.

**ಉನ್ನಿಕೃಷ್ಣನ್ ಜೆ.ಪಿ.v. ಆಂಧ್ರ ಪ್ರದೇಶ ರಾಜ್ಯ(1993) SCR(1)594:** ದೇಶದ ನಾಗರಿಕರು ಸಂವಿಧಾನದ ಅನುಚ್ಛೇದ 21 (ಜೀವಿಸುವ ಹಕ್ಕು) ರಿಂದ ಪ್ರಾಪ್ತವಾಗುವ ಶಿಕ್ಷಣದ ಮೂಲಭೂತ ಹಕ್ಕನ್ನು ಹೊಂದಿದ್ದಾರೆ. ಆದರೆ ಇದು ಒಂದು ಪರಿಪೂರ್ಣ ಹಕ್ಕಲ್ಲ ಮತ್ತು 14 ವರ್ಷ ವಯಸ್ಸಿನವರೆಗಿನ ಮಕ್ಕಳಿಗೆ ಮಾತ್ರ ಅನ್ವಯಿಸುತ್ತದೆ. ಅದರ ನಂತರ ಈ ಶಿಕ್ಷಣದ ಹಕ್ಕು ರಾಜ್ಯವ್ಯವಸ್ಥೆಯ ಆರ್ಥಿಕ ಸಾಮರ್ಥ್ಯ ಮತ್ತು ಅಭಿವೃದ್ಧಿಯ ಇತಿಮಿತಿಗಳಿಗೆ ಒಳಪಟ್ಟಿರುತ್ತದೆ.

**ಬಹುಮುಖ್ಯ ಅಂಶಗಳು**

(a) ಈ ಕಾಯಿದೆಯು, ಪ್ರತಿಯೊಂದು ಮಗುವೂ ತನ್ನ ನೆರೆಹೊರೆಯಲ್ಲಿರುವ ಶಾಲೆಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿದೆಯೆಂಬುದನ್ನು ಪ್ರತಿಪಾದಿಸುತ್ತದೆ. ಶಾಲೆಯು ಸರ್ಕಾರಿ ಅಥವಾ ಖಾಸಗಿ (ಅನುದಾನಿತ ಅಥವಾ ಅನುದಾನರಹಿತ) ಆಗಿರಬಹುದು. (ಖಾಸಗಿ ಶಾಲೆಗಳನ್ನು ಲಾಭರಹಿತ ಆಧಾರದ ಮೇಲೆ ನಡೆಸಬೇಕೆಂಬುದನ್ನು ಗಮನಿಸಿ; ಅದರ ಅರ್ಥವೆಂದರೆ ಹೆಚ್ಚುವರಿ ಹಣವನ್ನು ಸಂಸ್ಥೆಯಲ್ಲಿ ಮರಳಿ ಹೂಡಿಕೆ ಮಾಡಬೇಕು ಮತ್ತು ಯಾವುದೇ ಲಾಭಾಂಶವನ್ನು ಶಾಲೆಯ ಮಾಲೀಕತ್ವ ಹೊಂದಿರುವ ಸಮಿತಿಯ ಸದಸ್ಯರಿಗೆ ವಿತರಿಸುವಂತಿಲ್ಲ.)

(b) ಈ ಕಾಯಿದೆಯು ಎಲ್ಲಾ ಶಾಲೆಗಳಿಗೂ ಕೆಲವು ಕನಿಷ್ಠ ಮಾನದಂಡಗಳ ಪಾಲನೆಯನ್ನು ಕಡ್ಡಾಯಗೊಳಿಸುತ್ತದೆ. ಸರ್ಕಾರಿ ಶಾಲೆಗಳು ನಿಗದಿತ ವಿದ್ಯಾರ್ಥಿ-ಶಿಕ್ಷಕರ ಅನುಪಾತ (Pupil–Teacher Ratio (PTR)) ನಿಯಮದ ಮಾನದಂಡವನ್ನು ಪೂರೈಸಬೇಕು. ಇತರ ಎಲ್ಲಾ ಶಾಲೆಗಳೂ ಮಾನ್ಯತೆಯ ಪ್ರಮಾಣ ಪತ್ರ ಪಡೆಯಬೇಕು (ಈಗಾಗಲೇ ಸ್ಥಾಪಿಸಲ್ಪಟ್ಟಿರುವ ಶಾಲೆಗಳು ಈ ನಿಯಮವನ್ನು ಪೂರೈಸಲು ಮೂರು ವರ್ಷಗಳ ಕಾಲಾವಕಾಶ

ನೀಡಲಾಗುವುದು). ವಿದ್ಯಾರ್ಥಿ-ಶಿಕ್ಷಕರ ಅನುಪಾತ (PTR), ಮೂಲಸೌಕರ್ಯಗಳು ಮತ್ತು ಶಿಕ್ಷಕರ ವಿದ್ಯಾರ್ಹತೆಗಳಂತಹ ಕೆಲವು ಮಾನದಂಡಗಳನ್ನು ಶಾಲೆಯು ತೃಪ್ತಿಕರವಾಗಿ ಪೂರೈಸಿದ್ದರೆ ಅದಕ್ಕೆ ಮಾನ್ಯತೆಯನ್ನು ಮಂಜೂರು ಮಾಡಲಾಗುವುದು. ನಿಗದಿತ ಕಾಲಾವಧಿಯ ಒಳಗೆ ಈ ಮಾನದಂಡಗಳನ್ನು ಪೂರೈಸದ ಶಾಲೆಗಳನ್ನು ಮುಚ್ಚಿಸಲಾಗುವುದು. ಯಾವುದೇ ಶಾಲೆಯು ಈ ಉಪಬಂಧವನ್ನು ಉಲ್ಲಂಘಿಸಿದಲ್ಲಿ ಅದು ದಂಡ ಕಟ್ಟಬೇಕಾಗುತ್ತದೆ.

(c) ಸರ್ಕಾರಿ ಶಾಲೆಗಳಲ್ಲಿ ಪ್ರವೇಶ ಪಡೆದ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕು. ಅನುದಾನಿತ ಶಾಲೆಗಳಲ್ಲಿ ಉಚಿತ ಶಿಕ್ಷಣ ಪಡೆಯುವ ಮಕ್ಕಳ ಪ್ರಮಾಣವು ಅವುಗಳು ಪಡೆಯುವ ಅನುದಾನ ಮೊತ್ತದ ಅನುಪಾತದಲ್ಲಿರಬೇಕು; ಆದರೆ ಕನಿಷ್ಠ ಪಕ್ಷ ಶೇ. 25ರಷ್ಟು ಸೀಟುಗಳನ್ನು ಅವಕಾಶವಂಚಿತ ವಿದ್ಯಾರ್ಥಿಗಳಿಗಾಗಿ ಮೀಸಲಿಟ್ಟಿರಲೇಬೇಕು. ಇತರ ಎಲ್ಲಾ ಶಾಲೆಗಳು (ಅನುದಾನರಹಿತ ಶಾಲೆಗಳೂ ಸಹಿತ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಆದಾಯದ, ಮತ್ತು ಇತರ ಅವಕಾಶವಂಚಿತ ಅಥವಾ ದುರ್ಬಲ ಸಮುದಾಯಗಳ (ಅಂಗವಿಕಲ ಮಕ್ಕಳೂ ಸೇರಿದಂತೆ) ವಿದ್ಯಾರ್ಥಿಗಳಿಗೆ ಶೇ.25ರಷ್ಟು ಸೀಟುಗಳನ್ನು ಮೀಸಲಿರಿಸಬೇಕು. ಅನುದಾನರಹಿತ ಶಾಲೆಗಳಿಗೆ ಅವರ ಬೋಧನಾ ಶುಲ್ಕದಷ್ಟನ್ನು ಅಥವಾ ಸರ್ಕಾರಿ ಶಾಲೆಗಳಲ್ಲಿ ಪ್ರತಿ ವಿದ್ಯಾರ್ಥಿಗಾಗಿ ಮಾಡುವ ವೆಚ್ಚದಷ್ಟನ್ನು, ಇವುಗಳಲ್ಲಿ ಯಾವುದು ಕಡಮೆಯೋ ಅಷ್ಟನ್ನು, ಮರುಪಾವತಿ ಮಾಡಲಾಗುವುದು. ಪ್ರತಿ ವಿದ್ಯಾರ್ಥಿಗಾಗಿ ತಗಲುವ ವೆಚ್ಚವು ಸರ್ಕಾರಿ ಶಾಲೆಗಳದ್ದಕ್ಕಿಂತ ಅಧಿಕವಾಗಿದ್ದರೆ ಆ ಹೆಚ್ಚಿನ ಮೊತ್ತವನ್ನು ಖಾಸಗಿ ಶಾಲೆಗಳೇ ಭರಿಸಬೇಕು.

(d) ದೈಹಿಕ ಶಿಕ್ಷೆ, ಮಾನಸಿಕ ಕಿರುಕುಳ, ಮಕ್ಕಳ ಪ್ರವೇಶಾತಿಗಾಗಿ ಪರಿಶೀಲನಾ ಪ್ರಕ್ರಿಯೆಗಳು, ಕ್ಯಾಪಿಟೇಷನ್ ಶುಲ್ಕ ಸಂಗ್ರಹ, ಶಿಕ್ಷಕರಿಂದ ಖಾಸಗಿ ಬೋಧನೆ, ಅಧಿಕೃತ ಮಾನ್ಯತೆ ಪಡೆಯದೆ ಶಾಲೆಗಳನ್ನು ನಡೆಸುವುದು - ಇವುಗಳನ್ನು ಈ ಕಾಯಿದೆಯು ನಿಷೇಧಿಸುತ್ತದೆ. ಮಕ್ಕಳನ್ನು ತರಗತಿಯಲ್ಲಿ ಉಳಿಸಿಕೊಳ್ಳುವುದು, ಶಾಲೆಯಿಂದ ಹೊರಹಾಕುವುದು ಅಥವಾ ಪ್ರಾಥಮಿಕ ಶಿಕ್ಷಣ ಪೂರ್ಣವಾಗುವವರೆಗೆ ಮಂಡಳಿಯೊಂದರ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಅಗತ್ಯ - ಇವುಗಳನ್ನು ಕೂಡ ಅದು ನಿಷೇಧಿಸುತ್ತದೆ.

### ವಿವಿಧ ಶಾಲೆಗಳ ನಿಯಂತ್ರಣ ವ್ಯಾಪ್ತಿ

ಈ ಕಾಯಿದೆಯು ಎಲ್ಲಾ ಶಾಲೆಗಳಿಗೂ ಅನ್ವಯಿಸುವುದರಿಂದ ವಿವಿಧ ಬಗೆಯ ಶಾಲೆಗಳ ನಿಯಂತ್ರಣ ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಸರ್ಕಾರಿ ಶಾಲೆಗಳು ಮತ್ತು ಖಾಸಗಿ ಶಾಲೆಗಳು ಪೂರೈಸಬೇಕಿರುವ ಅವಶ್ಯಕತೆಗಳು ಭಿನ್ನವಾದವು ಎಂಬುದನ್ನು ಕೋಷ್ಟಕ 1.1 ರಿಂದ ತಿಳಿಯಬಹುದು. 6 ರಿಂದ 14 ವರ್ಷದೊಳಗಿನ ಸುಮಾರು ಶೇ.26 ರಷ್ಟು ಮಕ್ಕಳು ಖಾಸಗಿ ಶಾಲೆಗಳಲ್ಲಿ ದಾಖಲಾತಿ ಪಡೆದಿದ್ದಾರೆ (ಶೇ.7 ರಷ್ಟು ಪ್ರಾಥಮಿಕ ಶಾಲೆಗಳು ಮತ್ತು ಶೇ.13 ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಖಾಸಗಿಯವು [ಅನುದಾನಿತ ಮತ್ತು ಅನುದಾನರಹಿತ] ಎಂಬುದನ್ನು ಗಮನಿಸಬೇಕು) (GoI 2012; MHRD 2011d).

ಸರ್ಕಾರಿ ಶಾಲೆಗಳು ಪೂರೈಸಬೇಕಿರುವ ಒಂದೇ ನಿಬಂಧನೆ, ಅವು ವಿದ್ಯಾರ್ಥಿ-ಶಿಕ್ಷಕರ ಅನುಪಾತ (PTR) ನಿಯಮದ ಮಾನದಂಡವನ್ನು ಪೂರೈಸಬೇಕು. ಜೊತೆಗೆ ಈ ಮೂಲ ನಿಬಂಧನೆಯನ್ನು ಪೂರೈಸದಿದ್ದರೆ ಅವು ಯಾವುದೇ ಪರಿಣಾಮವನ್ನೂ ಎದುರಿಸಬೇಕಾಗಿಲ್ಲ. ಆದಾಗ್ಯೂ, ವಿದ್ಯಾರ್ಥಿ-ಶಿಕ್ಷಕರ ಅನುಪಾತ, ಮೂಲಸೌಕರ್ಯ ಮತ್ತು ಬೋಧನೆಗಳಿಗೆ ಸಂಬಂಧಿಸಿದ ನಿಯಮಗಳನ್ನು ಅನುಸರಿಸದಿದ್ದರೆ ಖಾಸಗಿ ಶಾಲೆಗಳು ತಮ್ಮ ಮಾನ್ಯತೆಯನ್ನು

ಕಳೆದುಕೊಳ್ಳುತ್ತವೆ ಹಾಗೂ ಅಂತಹ ಶಾಲೆಗಳನ್ನು ಮುಚ್ಚಬೇಕಾಗುತ್ತದೆ. ಶಾಲೆಯೊಂದು ಕ್ಯಾಪಿಟೇಷನ್ ಶುಲ್ಕವನ್ನು ಸಂಗ್ರಹಿಸಿದ ಅಥವಾ ಮಗುವೊಂದನ್ನು ಪ್ರವೇಶಾತಿ ಸಮಯದಲ್ಲಿ ಪರಿಶೀಲನಾ ಪ್ರಕ್ರಿಯೆಗೆ ಒಳಪಡಿಸಿದ ಪಕ್ಷದಲ್ಲಿ, ಕಾಯಿದೆಯು ದಂಡ ವಿಧಿಸುವ ಪ್ರಸ್ತಾಪ ಕೂಡ ಮಾಡುತ್ತದೆ. ಅಷ್ಟೇ ಅಲ್ಲದೆ, ಕಾಯಿದೆಯು ಎಲ್ಲಾ ಮಕ್ಕಳ ದಾಖಲಾತಿಯನ್ನು ಖಾತರಿಪಡಿಸುವ ಬಾಧ್ಯತೆಯನ್ನು ಸರ್ಕಾರದ ಮೇಲೆ ಹೊರೆಸುತ್ತದೆ, ಆದರೆ ಸರ್ಕಾರದ ಯಾವ ವಿಭಾಗವು ಈ ಬಾಧ್ಯತೆಯನ್ನು ನಿರ್ವಹಿಸಬೇಕೆಂಬುದನ್ನು ಸೂಚಿಸುವುದಿಲ್ಲ.

**ಶಿಕ್ಷಣದ ಗುಣಮಟ್ಟ**

ಈ ಕಾಯಿದೆಯ ಆದ್ಯ ಗಮನವಿರುವುದು ಶಾಲಾಶಿಕ್ಷಣ ಪಡೆಯುವ ಹಕ್ಕು ಮತ್ತು ಭೌತಿಕ ಮೂಲಸೌಕರ್ಯಗಳ ಕುರಿತಂತೆ ಮಾತ್ರ. ಅದರಲ್ಲಿ ಶಾಲೆಯೊಂದು ಕನಿಷ್ಠ ಗುಣಮಟ್ಟದ ಶಿಕ್ಷಣ ನೀಡುವುದನ್ನು ಖಚಿತಪಡಿಸುವ ಯಾವುದೇ ನಿಯಮವಿಲ್ಲ. ಶಿಕ್ಷಕರ ಕರ್ತವ್ಯಗಳು ಕೂಡ ಸಮಯನಿಷ್ಠೆ, ಹಾಜರಾತಿ ಇತ್ಯಾದಿಗಳಿಗೆ ಮಾತ್ರ ಸಂಬಂಧಿಸಿವೆಯೇ ಹೊರತು ಅವರ ವಿದ್ಯಾರ್ಥಿಗಳ ಕಲಿಕಾ ಸಾಧನೆಗಳಿಗೆ ಅಲ್ಲ. ಸರ್ವ ಶಿಕ್ಷಣ ಅಭಿಯಾನ (Sarva Shiksha Abhiyan) ವೂ ಸೇರಿದಂತೆ ಸರ್ಕಾರದ ಹಲವಾರು ಕಾರ್ಯಕ್ರಮಗಳ ಅನುಷ್ಠಾನದ ಬಳಿಕವೂ ಬಹಳಷ್ಟು ವಿದ್ಯಾರ್ಥಿಗಳು ತಮ್ಮ ತರಗತಿಯ ಮಟ್ಟಗಳಿಗಿಂತ ಬಹಳ ಕಡಮೆ ಸಾಮರ್ಥ್ಯ ತೋರುತ್ತಿದ್ದಾರೆ (GoI, 2012). ಅದರ ಜೊತೆಗೆ, ಪ್ರಾಥಮಿಕ ಶಿಕ್ಷಣ ಮುಗಿಯುವವರೆಗೆ ಯಾವ ಮಗುವನ್ನೂ ಒಂದೇ ತರಗತಿಯಲ್ಲಿ ತಡೆಹಿಡಿಯುವಂತಿಲ್ಲ ಎಂಬ ಆದೇಶದಿಂದ, ಒಂದು ನಿರ್ದಿಷ್ಟ ಮಟ್ಟದ ಕಲಿಕಾ ಫಲಿತಾಂಶವನ್ನು ಸಾಧಿಸದೆ ಮಕ್ಕಳು 8ನೇ ತರಗತಿಯನ್ನು ತಲುಪವಂತಾಗಬಹುದು. ವಾಸ್ತವವಾಗಿ, ಶೇ.95 ರಷ್ಟು ಅಧಿಕ ತೇರ್ಗಡೆ ಪ್ರಮಾಣವಿದ್ದರೂ 4 ಮತ್ತು 5ನೇ ತರಗತಿಗಳ ಮಕ್ಕಳ ಕಲಿಕಾ ಫಲಿತಾಂಶಗಳು ರೂಢಿಯ ಪ್ರಮಾಣಕ್ಕಿಂತ ಬಹಳ ಕಡಮೆ ಮಟ್ಟದಲ್ಲಿವೆಯೆಂಬುದನ್ನು ಕೆಲವು ಅಧ್ಯಯನಗಳು ತೋರಿಸಿವೆ (NUEPA (National Institute of Educational Planning and Administration) 2009). ಕಾಯಿದೆಯು ಈ ಸಮಸ್ಯೆಯನ್ನು ಉದ್ದೇಶಿಸುವುದಿಲ್ಲ; ಅಷ್ಟೇ ಅಲ್ಲದೆ, ತಮ್ಮ ಸಮಾನಸ್ಕಂಧರಿಗಿಂತಲೂ ಕೆಳಮಟ್ಟದ ಸಾಧನೆ ತೋರುತ್ತಿರುವ ವಿದ್ಯಾರ್ಥಿಗಳಿಗೆ ಯಾವುದೇ ಪರಿಹಾರಕ ತರಬೇತಿ ನೀಡಬೇಕೆಂದು ಶಾಲೆಗಳಿಗೆ ಆದೇಶ ನೀಡಿಲ್ಲ. ಅದು ಪೋಷಕರು ಮತ್ತು ಪಾಲಕರಿಗೆ, ಸ್ವಇಚ್ಛೆಯಿಂದ ತಮ್ಮ ಮಕ್ಕಳನ್ನು ಶಾಲೆಯಲ್ಲಿ ತೇರ್ಗಡೆಗೊಳಿಸದಂತೆ ತಡೆಯುವ ಆಯ್ಕೆಯನ್ನು ನೀಡಿಲ್ಲ. ತರಬೇತಿ ಪಡೆದ ಶಿಕ್ಷಕರ ಕೊರತೆಯ ಸಮಸ್ಯೆ ಹಾಗೆಯೇ ಉಳಿದುಕೊಂಡಿದೆ. ಎಲ್ಲ ಪ್ರಾಥಮಿಕ ಶಾಲೆಗಳ ಸರಿಸುಮಾರು ಶೇ.45 ರಷ್ಟು ಶಿಕ್ಷಕರು ಪದವಿ ಶಿಕ್ಷಣವನ್ನು ಸಹ ಪಡೆದಿಲ್ಲ (NUEPA 2010). ಇಂತಹ ಸನ್ನಿವೇಶದಲ್ಲಿ ಕೆಲವು ರಾಜ್ಯಗಳು ಶಿಕ್ಷಣದ ಗುಣಮಟ್ಟ ಕಾಪಾಡುವಂತಹ ಮಾನದಂಡ ಸೂತ್ರಗಳ ರೂಪರೇಖೆಗಳನ್ನು (norms) ಗೊತ್ತುಮಾಡುವಲ್ಲಿ ಮುಂದಾಳತ್ವ ವಹಿಸಿವೆ. ಉದಾಹರಣೆಗೆ, ಗುಜರಾತ್ ರಾಜ್ಯ ಹೊರಡಿಸಿರುವ RTE ನಿಬಂಧನೆಗಳ ಅಧಿಸೂಚನೆಯ ಒಂದು ಘೋಷಣೆ ಹೀಗಿದೆ: ಸಮಗ್ರವಾಗಿ ಮತ್ತು ಹಿಂದಿನ ವರ್ಷಗಳಿಗಿಂತ ಉತ್ತಮವಾಗಿ, ಈ ಎರಡೂ ರೀತಿಯಲ್ಲಿಯೂ, ನಿರ್ದಿಷ್ಟ ಮಟ್ಟದ ಕಲಿಕಾ ಫಲಿತಾಂಶಗಳನ್ನು ಸಾಧಿಸುತ್ತೇವೆಂದು ಶಾಲೆಗಳು ಪ್ರತಿಪಾದಿಸಿ ತೋರಿಸಿದ್ದಾದರೆ ಅವು ಮೂಲಸೌಕರ್ಯಗಳಿಗೆ ಸಂಬಂಧಪಟ್ಟ ನಿಯಮಗಳನ್ನು ಪಾಲಿಸಬೇಕಾಗಿಲ್ಲ.[9]

2008 ರಲ್ಲಿ ಶ್ರೀ ಸ್ಯಾಮ್ ಪಿಟ್ರೋಡಾ ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಜ್ಞಾನ ಆಯೋಗವು (National Knowledge Commission (NKC)) ಸರ್ಕಾರಿ ಮತ್ತು ಖಾಸಗಿ ಶಾಲೆಗಳೆರಡಕ್ಕೂ ಗುಣಮಟ್ಟ ನಿರ್ಧರಿಸುವ ಸಲುವಾಗಿ ರಾಷ್ಟ್ರಮಟ್ಟದ ತಪಾಸಣಾ ಘಟಕ (Testing Body) ವೊಂದನ್ನು ರಚಿಸುವಂತೆ ಸಲಹೆ ನೀಡಿತ್ತು. ಕಲಿಕೆಯ

ಹಂತಗಳು, ದಾಖಲಾತಿ ಮತ್ತು ಹಾಜರಾತಿಗಳಂತಹ ಹಲವು ಬಗೆಯ ಸೂಚಕಗಳನ್ನು ಆಧರಿಸಿ ಶಾಲೆಗಳ ಮೇಲ್ವಿಚಾರಣೆ ನಡೆಸುವುದು ಈ ತಪಾಸಣಾ ಘಟಕದ ಮುಖ್ಯ ಜವಾಬ್ದಾರಿ (NKC 2007).

**ಅವಕಾಶವಂಚಿತ ಸಮುದಾಯಗಳಿಗೆ ಸೀಟುಗಳ ಮೀಸಲಾತಿ**

ಈ ಕಾಯಿದೆಯು ಶೇ.25 ರಷ್ಟು ಸೀಟುಗಳನ್ನು ಅವಕಾಶವಂಚಿತ ಸಮುದಾಯಗಳಿಗೆ ಮೀಸಲಿರಿಸುವಂತೆ ಖಾಸಗಿ ಶಾಲೆಗಳಿಗೆ ಆದೇಶಿಸುತ್ತದೆ. ಖಾಸಗಿ ಶಾಲೆಗಳ ಒಕ್ಕೂಟಗಳು ಈ ಉಪಬಂಧದ ಸ್ವೀಕಾರಾರ್ಹತೆಯನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದವು. ಆದಾಗ್ಯೂ, ನ್ಯಾಯಾಲಯವು ಈ ಉಪಬಂಧವು, ಅನುದಾನರಹಿತ ಅಲ್ಪಸಂಖ್ಯಾತರ ಶಾಲೆಗಳನ್ನು ಹೊರತುಪಡಿಸಿ, ಸಂವಿಧಾನಬದ್ಧವೆಂದು ತೀರ್ಪು ನೀಡಿತು. ಅಲ್ಲದೆ, ಮನೆಗಳಲ್ಲಿದ್ದು ಶಾಲೆಗೆ ಹಾಜರಾಗುವವರಿಗೆ (day scholars) ಮಾತ್ರವೇ ಅಥವಾ ವಸತಿಶಾಲೆಗಳಲ್ಲಿ ಇರುವವರಿಗೂ (boarders) ಈ ಕಾಯಿದೆಯು ಅನ್ವಯವಾಗುವುದೇ ಎಂಬುದನ್ನು ಸಹ ಸ್ಪಷ್ಟೀಕರಿಸುವಂತೆ ಸರ್ಕಾರವನ್ನು ಕೋರಿತು.

ಸರ್ವೋಚ್ಚ ನ್ಯಾಯಾಲಯವು ಈ ಉಪಬಂಧದ ಸಾಂವಿಧಾನಿಕ ಸ್ವೀಕಾರಾರ್ಹತೆಯ ವಿಷಯವನ್ನು ಬಗೆಹರಿಸಿತಾದರೂ, ಇನ್ನಿತರ ಆತಂಕಗಳು ಹಾಗೆಯೇ ಉಳಿದುಕೊಂಡಿವೆ. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಪ್ರತಿ ಮಗುವಿಗೆ ಮಾಡುವ ಸರಾಸರಿ ವೆಚ್ಚದಷ್ಟು ಮಾತ್ರ ಖಾಸಗಿ ಶಾಲೆಗಳಿಗೆ ಮರುಪಾವತಿ ಮಾಡಲಾಗುತ್ತದೆ. ಇದರಿಂದಾಗಿ ಇತರ ವಿದ್ಯಾರ್ಥಿಗಳ ಶಾಲಾಶುಲ್ಕದಲ್ಲಿ ಹೆಚ್ಚಳವಾಗುತ್ತದೆಯೇ ಎಂಬುದನ್ನು ಕಾದು ನೋಡಬೇಕಾಗಿದೆ (ಇವರು ಅವಕಾಶವಂಚಿತ ಸಮುದಾಯಗಳಿಂದ ಬಂದ ವಿದ್ಯಾರ್ಥಿಗಳ ವೆಚ್ಚದ ಪಾಲನ್ನು ಭರಿಸಬೇಕಾಗಬಹುದು). ಅನುದಾನರಹಿತ ಅಲ್ಪಸಂಖ್ಯಾತರ ಶಾಲಾಸಂಸ್ಥೆಗಳಿಗೆ ಈ ಉಪಬಂಧದ ವಿನಾಯಿತಿ ನೀಡಿರುವುದನ್ನು ಸಹ ಕೆಲವು ತಜ್ಞರು ಪ್ರಶ್ನಿಸಿದ್ದಾರೆ (Mehta (ಮೆಹ್ತಾ) 2012).

**ಕೋಷ್ಟಕ 1.1  ವಿವಿಧ ಶಾಲೆಗಳಿಗಿರುವ ನಿಯಂತ್ರಣ ವ್ಯಾಪ್ತಿಯ ಹೋಲಿಕೆ**

| ಸರ್ಕಾರಿ ಶಾಲೆಗಳು | ಇತರ ಶಾಲೆಗಳು (ಅನುದಾನಿತ ಮತ್ತು ಅನುದಾನರಹಿತ ಸೇರಿದಂತೆ) |
|---|---|
| ಪ್ರವೇಶ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಶಿಕ್ಷಣ ನೀಡಬೇಕು. | ಶೇ.25 ಸೀಟುಗಳನ್ನು ಅವಕಾಶವಂಚಿತ ವಿದ್ಯಾರ್ಥಿಗಳಿಗಾಗಿ ಮೀಸಲಿರಿಸಬೇಕು. |
| ಮಾನ್ಯತೆಯ ಅಗತ್ಯವಿಲ್ಲ. PTR ನಿಬಂಧನೆಯನ್ನು ಪೂರೈಸಬೇಕು. | ಮಾನ್ಯತೆ ಕಡ್ಡಾಯವಿದೆ. PTR, ಮೂಲಸೌಕರ್ಯಗಳು, ಶಿಕ್ಷಕರ ವಿದ್ಯಾರ್ಹತೆ - ಇಂತಹ ನಿಬಂಧನೆಗಳನ್ನು ಪೂರೈಸುವ ಶಾಲೆಗಳಿಗೆ ಮಾನ್ಯತೆಯನ್ನು ಮಂಜೂರು ಮಾಡಲಾಗುವುದು. |
| ಉಪಬಂಧ ಇಲ್ಲ. | ನಿಬಂಧನೆಗಳನ್ನು ಪೂರೈಸದಿದ್ದರೆ ಶಾಲೆಗಳನ್ನು ಮುಚ್ಚಲಾಗುವುದು. |
| ಉಪಬಂಧ ಇಲ್ಲ. | ಶಾಲೆಯೊಂದು ಮಾನ್ಯತೆಯಿಲ್ಲದೆ ಕಾರ್ಯಾಚರಣೆ ಮಾಡುತ್ತಿದ್ದಲ್ಲಿ ಅದು ದಂಡ ಕಟ್ಟಬೇಕಾಗುತ್ತದೆ. |
| ಪೋಷಕರು ಮತ್ತು ಸ್ಥಳೀಯ ಪೌರಾಡಳಿತ ಸಂಸ್ಥೆಯ ಸದಸ್ಯರ ಪ್ರತಿನಿಧಿಗಳನ್ನೊಳಗೊಂಡ ಶಾಲಾ ವ್ಯವಸ್ಥಾಪಕ ಸಮಿತಿಯನ್ನು ರಚಿಸಬೇಕು. ಇದು ಶಾಲಾಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು. | ಅನುದಾನರಹಿತ ಶಾಲೆಗಳಿಗೆ ಉಪಬಂಧ ಇಲ್ಲ. ಇತರ ಶಾಲೆಗಳು ಶಾಲಾ ವ್ಯವಸ್ಥಾಪಕ ಸಮಿತಿಯನ್ನು ರಚಿಸಬೇಕು; ಇದು ಸಲಹಾತ್ಮಕ ಪಾತ್ರ ನಿರ್ವಹಿಸುವುದು. |

Source: PRS Legislative Research; Right to Education Act, 2009.

.

**ಚೌಕಟ್ಟು 1.2**

**ಖಾಸಗಿ ಶಾಲೆಗಳಲ್ಲಿ ಶೇ.25 ಮೀಸಲಾತಿ ಕುರಿತು ಸರ್ವೋಚ್ಚ ನ್ಯಾಯಾಲಯದ ತೀರ್ಪು**

**ಸೊಸೈಟಿ ಫಾರ್ ಅನ್-ಏಡೆಡ್ ಪ್ರೈವೇಟ್ ಸ್ಕೂಲ್ಸ್ ಆಫ್ ರಾಜಸ್ಥಾನ್ v. ಯೂನಿಯನ್ ಆಫ್ ಇಂಡಿಯಾ [ ರಿಟ್ ಪಿಟಿಷನ್ (ಸಿ) ನಂ. 95 ಆಫ್ 2010]**: RTE ಕಾಯಿದೆಯು ಸಂವಿಧಾನಬದ್ಧವಾಗಿದೆ ಮತ್ತು ಅದು ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಹಾಗೂ ಅನುದಾನರಹಿತ ಅಲ್ಪಸಂಖ್ಯಾತೇತರ ಶಾಲೆಗಳಿಗೂ ಅನ್ವಯಿಸುತ್ತದೆ. ಆದಾಗ್ಯೂ, ಅನುಚ್ಛೇದ 30(1)ರ ರಕ್ಷಣೆಯಿರುವ ಕಾರಣದಿಂದ ಅನುದಾನರಹಿತ ಅಲ್ಪಸಂಖ್ಯಾತ ಶಾಲೆಗಳಿಗೆ ಅದು ಅನ್ವಯಿಸುವುದಿಲ್ಲ.

ಬಹುಮತದ ಮೂಲಕ ನೀಡಲಾದ ಈ ತೀರ್ಪು ಸಂವಿಧಾನದ ಅನುಚ್ಛೇದ 21A ಅನುಸಾರ, 6 ರಿಂದ 14 ವರ್ಷ ವಯಸ್ಸಿನೊಳಗಿನ, ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವ ಬಾಧ್ಯತೆಯು ರಾಜ್ಯವ್ಯವಸ್ಥೆಯ ಮೇಲಿದೆಯೆಂದು ಆದೇಶಿಸಿತು. ಅದಾಗ್ಯೂ, ಈ ಬಾಧ್ಯತೆಯನ್ನು ಯಾವ ವಿಧಾನದಿಂದ ನಿರ್ವಹಿಸಬೇಕೆಂಬ ತೀರ್ಮಾನವನ್ನು ರಾಜ್ಯವ್ಯವಸ್ಥೆಯೇ ಕಾನೂನಿನಾನ್ವಯ ನಿರ್ಣಯಿಸಬೇಕು. ಆದ್ದರಿಂದ, ಅದು ತನ್ನ ಬಾಧ್ಯತೆಯನ್ನು ತನ್ನ ಶಾಲೆಗಳ ಮೂಲಕ ಅಥವಾ ಅನುದಾನಿತ/ ಅನುದಾನರಹಿತ ಶಾಲೆಗಳ ಮೂಲಕ ಪೂರೈಸುವುದೋ ಎಂಬ ನಿರ್ಧಾರವನ್ನು ರಾಜ್ಯವ್ಯವಸ್ಥೆಗೇ ಬಿಡಲಾಗಿದೆ. ಇಷ್ಟೇ ಅಲ್ಲದೆ, ಅನುದಾನರಹಿತ ಅಲ್ಪಸಂಖ್ಯಾತೇತರ ಮತ್ತು ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳಿಗೆ ಯಾವ ಬಾಧ್ಯತೆಯೂ ಇಲ್ಲ. ಹಾಗಾಗಿ, ಸೀಟುಗಳ ಮೀಸಲಾತಿ ನಿಬಂಧನೆಯನ್ನು ಸ್ವಯಂಪ್ರೇರಣೆ, ಸ್ವಾಯತ್ತತೆ ಮತ್ತು ಸರ್ವಾನುಮತ ತತ್ವಗಳಿಗೆ ಅನುಸಾರವಾಗಿ ಮಾತ್ರ ಕಾರ್ಯಗತಗೊಳಿಸಬಹುದೇ ವಿನಾ ಬಲವಂತದಿಂದ ಅಥವಾ ಮಾನ್ಯತೆ ರದ್ದತಿಯ ಬೆದರಿಕೆಯಿಂದಲ್ಲ.

## ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ

ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ (9 - 12ನೇ ತರಗತಿಗಳು) ಮೂಲತಃ ರಾಜ್ಯ ಸರ್ಕಾರಗಳ ಜವಾಬ್ದಾರಿ. ಈ ಹಂತದಲ್ಲಿ ಪೂರ್ವ ಏಷ್ಯಾ (ಸರಾಸರಿ ಶೇ.70) ಮತ್ತು ಲ್ಯಾಟಿನ್ ಅಮೆರಿಕಾ (ಸರಾಸರಿ ಶೇ. 82) ಗಳಿಗೆ ಹೋಲಿಸಿದರೆ ಭಾರತದ ಒಟ್ಟು ದಾಖಲಾತಿ ಪ್ರಮಾಣವು (GER) (ಶೇ.49) ಬಹಳ ಕಡಮೆ ಇದೆ (World Bank 2009). ದೇಶದಲ್ಲಿ ಮಾಧ್ಯಮಿಕ ಶಿಕ್ಷಣ ನೀಡುತ್ತಿರುವ 190,643 ಸಂಸ್ಥೆಗಳಿವೆ.[10] ಮಾಧ್ಯಮಿಕ ಶಿಕ್ಷಣದ ಹಂತದಲ್ಲಿ (ಲಾಭರಹಿತ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ) ಖಾಸಗಿ ಶಾಲೆಗಳ ಪ್ರಮಾಣವು ಶೇಕಡ 60 ಆಗಿದೆ (ibid.).

ಮಾಧ್ಯಮಿಕ ಶಿಕ್ಷಣಕ್ಕೆ ಉತ್ತೇಜನ ನೀಡುವ ಸಲುವಾಗಿ ಕೇಂದ್ರ ಸರ್ಕಾರವು 2009ರಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ (Rashtriya Madhyamik Shiksha Abhiyan) ವನ್ನು ಪ್ರಾರಂಭಿಸಿತು. ಈ ಅಭಿಯಾನವು ಐದು ವರ್ಷಗಳೊಳಗೆ ದಾಖಲಾತಿ ಪ್ರಮಾಣ ಶೇ.75 ಕ್ಕೆ ಏರಿಕೆ, 2017 ರಷ್ಟಕ್ಕೆ ಸಾರ್ವತ್ರಿಕ ಅವಕಾಶ ಲಭ್ಯತೆ ಸಾಧಿಸುವ ಮತ್ತು 2020 ರಷ್ಟಕ್ಕೆ ಸರ್ವರನ್ನೂ ಪ್ರಾಥಮಿಕ ಶಿಕ್ಷಣ ಮುಗಿಯುವವರಿಗೆ ಶಾಲೆಯಲ್ಲಿ ಉಳಿಸಿಕೊಳ್ಳುವ ಗುರಿ ಹೊಂದಿದೆ. ಅವಕಾಶ ಲಭ್ಯತೆಯ ಸಾರ್ವತ್ರೀಕರಣದ ಗುರಿ ಸಾಧಿಸಲು, 2017 ರಷ್ಟಕ್ಕೆ ಶೇ.100 ರಷ್ಟು ಒಟ್ಟು ದಾಖಲಾತಿ ಪ್ರಮಾಣ(GER)ವನ್ನು ಖಾತರಿಗೊಳಿಸಲು 19,946 ಅಧಿಕ ಮಾಧ್ಯಮಿಕ ಶಿಕ್ಷಣದ ಶಾಲೆಗಳ ಅಗತ್ಯವಿದೆಯೆಂದು ಮಾಧ್ಯಮಿಕ ಶಿಕ್ಷಣದ ಕಾರ್ಯಪಡೆ ಅಂದಾಜಿಸಿದೆ.[11]

### ಮಾಧ್ಯಮಿಕ ಶಿಕ್ಷಣದ ನಿಯಂತ್ರಣ

ಶಾಲೆಗಳು ರಾಜ್ಯದ ಸಂಬಂಧಪಟ್ಟ ಶಾಲಾಶಿಕ್ಷಣ ಇಲಾಖೆಗಳಿಂದ ಮಾನ್ಯತೆ ಪಡೆಯುತ್ತವೆ. ಮಾನ್ಯತೆ ಪಡೆದ ಹಾಗೂ 10 ಮತ್ತು 12ನೇ ತರಗತಿಗಳ ಅಂತ್ಯದಲ್ಲಿ ಸಾರ್ವತ್ರಿಕ ಪರೀಕ್ಷೆ ನಡೆಸುವ ಪ್ರತಿ ಶಾಲೆಯೂ ಅಂತಹ ಪರೀಕ್ಷೆಗಳನ್ನು ಆಯೋಜಿಸುವ ಒಂದು ಮಂಡಳಿ ಅಥವಾ ಪರಿಷತ್ತಿನೊಂದಿಗೆ ಸಂಯೋಜಿತವಾಗಿರಬೇಕು. ಮೂರು ಕೇಂದ್ರೀಯ ಮಂಡಳಿ/ಪರಿಷತ್ತುಗಳಿವೆ:

(a) ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ (Central Board of Secondary Education (CBSE))
(b) ರಾಷ್ಟ್ರೀಯ ಮುಕ್ತ ಶಾಲಾಶಿಕ್ಷಣ ಸಂಸ್ಥೆ (National Institute of Open Schooling (NIOS)) ಮತ್ತು
(c) ಭಾರತೀಯ ಶಾಲಾ ಪ್ರಮಾಣಪತ್ರ ಪರೀಕ್ಷೆಗಾಗಿ ಪರಿಷತ್ (Council for the Indian School Certificate Examination (CISCE))

ಪ್ರತಿಯೊಂದು ರಾಜ್ಯವೂ ರಾಜ್ಯಮಂಡಳಿಗಳನ್ನು ಹೊಂದಿರುತ್ತದೆ; ಉದಾಹರಣೆಗೆ, ಆಂಧ್ರ ಪ್ರದೇಶ ಮಾಧ್ಯಮಿಕ ಶಿಕ್ಷಣ ಮಂಡಳಿ, ಬಿಹಾರ ಶಾಲಾಪರೀಕ್ಷಾ ಮಂಡಳಿ ಮತ್ತು ಮಹಾರಾಷ್ಟ್ರ ರಾಜ್ಯ ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ ಮಂಡಳಿ. ರಾಜ್ಯ ಮಂಡಳಿಗಳು ಶಾಸನೋಕ್ತ ಘಟಕಗಳಾಗಿರುತ್ತವೆ ಅಥವಾ ರಾಜ್ಯದ ಶಿಕ್ಷಣ ಇಲಾಖೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತವೆ. ಅವುಗಳ ಗುಣಮಟ್ಟ, ಅವು ಕಲಿಕೆಗೆ ಸಂಬಂಧಿಸಿದಂತೆ ಏನನ್ನು ಮೌಲ್ಯಮಾಪನ ಮಾಡುತ್ತವೆ ಮತ್ತು ಗುಣಾಂಕಗಳನ್ನು ಹೇಗೆ ನೀಡುತ್ತವೆ – ಈ ವಿಷಯಗಳನ್ನು ಕುರಿತಂತೆ ಮಂಡಳಿಗಳಲ್ಲಿ ಗಮನಾರ್ಹ ಭಿನ್ನತೆಯಿದೆ. ಈ ಶಾಲಾ ಮಂಡಳಿಗಳು ಪಠ್ಯಕ್ರಮವನ್ನು ನಿಗದಿ ಮಾಡುತ್ತವೆ ಹಾಗೂ ಅಂತಿಮ ಮೌಲ್ಯಮಾಪನವನ್ನು ಮಾಡುತ್ತವೆ (World Bank 2009).

2010 ರಿಂದ, CBSE ತನ್ನೊಂದಿಗೆ ಸಂಯೋಜಿತವಾಗಿರುವ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ತನ್ನ 10ನೇ ತರಗತಿಯ ಮಂಡಳಿ ಪರೀಕ್ಷೆಯನ್ನು ಐಚ್ಛಿಕವಾಗಿಸಿತು. ಅದು ತನ್ನೊಂದಿಗೆ ಸಂಯೋಜಿತವಾಗಿರುವ ಶಾಲೆಗಳ ಗುಣಮಟ್ಟವನ್ನು ಉತ್ತಮಪಡಿಸಲು ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ವ್ಯವಸ್ಥೆ (Continuous and Comprehensive Evaluation (CCE))ಯನ್ನು ಪರಿಚಯಿಸಿತು. ವಿದ್ಯಾರ್ಥಿಗಳು 10ನೇ ತರಗತಿಯ ನಂತರ ಅದೇ ಶಾಲೆಯಲ್ಲಿ ಮುಂದುವರೆದರೆ ಅವರನ್ನು CCE ಆಧರಿಸಿಯಾಗಲೀ ಅಥವಾ 10ನೇ ತರಗತಿಯ ಮಂಡಳಿ ಪರೀಕ್ಷಾ ಫಲಿತಾಂಶವನ್ನು ಆಧರಿಸಿಯಾಗಲೀ ತೇರ್ಗಡೆ ಮಾಡಬಹುದು. ವಿದ್ಯಾರ್ಥಿಯು 10ನೇ ತರಗತಿಯ ನಂತರ CBSE ವ್ಯವಸ್ಥೆಯನ್ನು ಬಿಡಲು ಇಚ್ಛಿಸಿದಲ್ಲಿ ಆ ವಿದ್ಯಾರ್ಥಿಯು CBSE ಆಯೋಜಿಸುವ ಮಂಡಳಿ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ.[12] CBSEಯ ಈ ವ್ಯವಸ್ಥೆಯನ್ನು ಹಲವು ರಾಜ್ಯ ಮಂಡಳಿಗಳಿಗೆ ಪರಿಚಯಿಸಲಾಗಿದ್ದರೂ ರಾಜ್ಯ ಮಟ್ಟದಲ್ಲಿ ಅದರ ಅನುಷ್ಠಾನ ಇನ್ನೂ ಆಗಬೇಕಾಗಿದೆ.

**ಶುಲ್ಕ:** ಖಾಸಗಿ ಶಾಲೆಗಳು ವಿದ್ಯಾರ್ಥಿಗಳಿಗೆ ವಿಧಿಸುವ ಶುಲ್ಕವನ್ನು ಕೇಂದ್ರ ಸರ್ಕಾರ ನಿಯಂತ್ರಿಸುವುದಿಲ್ಲ. CISCE ಮತ್ತು CBSE ಯ ಸಂಯೋಜನಾ ಉಪನಿಯಮಗಳು ಈ ಮಂಡಳಿಗಳ ಜೊತೆಗೆ ಸಂಯೋಜಿತವಾಗಿರುವ ಶಾಲೆಗಳಿಂದ ವಿಧಿಸಲ್ಪಡುವ ಶುಲ್ಕವು, ಆಯಾ ಶಾಲೆಗಳು ಒದಗಿಸುವ ಸೌಲಭ್ಯಗಳಿಗೆ ತಕ್ಕಂತೆ ಇರಬೇಕೆಂಬುದನ್ನು ಸ್ಪಷ್ಟಪಡಿಸುತ್ತವೆ. ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಕ್ಯಾಪಿಟೇಷನ್ ಶುಲ್ಕ ವಿಧಿಸುವುದನ್ನಾಗಲೀ ಅಥವಾ ವಂತಿಗೆಗಳನ್ನು ಸ್ವೀಕರಿಸುವುದನ್ನಾಗಲೀ ಮಾಡುವಂತಿಲ್ಲ.[13] ರಾಜ್ಯ ಮಂಡಳಿಗಳ ಅಡಿಯಲ್ಲಿರುವ ಖಾಸಗಿ ಶಾಲೆಗಳು ಆಯಾ ರಾಜ್ಯ ಸರ್ಕಾರಗಳ ನಿಯಮಾವಳಿಗಳನ್ನು ಪಾಲಿಸಬೇಕು. ಪ್ರಸ್ತುತ, ಬಹುತೇಕ ರಾಜ್ಯಗಳು ಖಾಸಗಿ ಶಾಲೆಗಳಿಗೆ, ಕೆಲವು ನಿರ್ಬಂಧಗಳಿಗೊಳಪಟ್ಟು, ತಮ್ಮ ಶುಲ್ಕವನ್ನು ತಾವೇ ನಿಗದಿ ಮಾಡಿಕೊಳ್ಳಲು ಅವಕಾಶ ನೀಡಿವೆ (ನಿರ್ಬಂಧಗಳ ಉದಾಹರಣೆ: ಕ್ಯಾಪಿಟೇಷನ್ ಶುಲ್ಕ ವಿಧಿಸುವುದಕ್ಕೆ ನಿಷೇಧ ಮತ್ತು ಖಾಸಗಿ ಶಾಲೆಗಳು ತಮ್ಮ ಶುಲ್ಕವ್ಯವಸ್ಥೆಗೆ ಸರ್ಕಾರದ ಅನುಮೋದನೆ ಪಡೆಯುವ ಅಗತ್ಯ) (Ashar (ಆಶರ್) ಮತ್ತು Bhandary (ಭಂಡಾರಿ) 2011; *Business Standard* (ಬಿಸ್ನೆಸ್ ಸ್ಟ್ಯಾಂಡರ್ಡ್) 2012; *Deccan Chronicle* (ಡೆಕನ್ ಕ್ರಾನಿಕಲ್) 2012).[14]

ಸಂಗ್ರಹಿಸಿದ ಹೆಚ್ಚುವರಿ ಆದಾಯವನ್ನು ಶಾಲೆಯ ವಿಶ್ವಸ್ಥ ಮಂಡಳಿಗಳು ಮತ್ತು ಸಂಘಗಳು ಅದೇ ಶಾಲೆಯ ಅಭಿವೃದ್ಧಿಗಾಗಿ ಮರುಬಳಕೆ ಮಾಡಬೇಕಾದದ್ದು ಅಗತ್ಯ; ಆದಾಗ್ಯೂ, ಅದರಿಂದ ತಪ್ಪಿಸಿಕೊಳ್ಳಲು ಕೆಲವು ಶಿಕ್ಷಣದಾತರು ಹೊಸ ವ್ಯವಸ್ಥೆಗಳನ್ನು ಸೃಷ್ಟಿಸಿರುವುದಕ್ಕೆ ಪುರಾವೆ ಇದೆ. ಅವರು ಎರಡು ಸ್ತರಗಳ ಕಾನೂನಾತ್ಮಕ ವ್ಯವಸ್ಥೆಯ ಮುಖಾಂತರ ಕಾರ್ಯಾಚರಣೆ ನಡೆಸುತ್ತಾರೆ: ಶಾಲೆಯನ್ನು ನಡೆಸುವ ವಿಶ್ವಸ್ಥ ಮಂಡಳಿ ಒಂದು ಹಾಗೂ (ಜಮೀನು ಮತ್ತು ಕಟ್ಟಡ) ಆಸ್ತಿಗಳ ಮಾಲೀಕತ್ವ ಹೊಂದಿರುವ ಮತ್ತು (ವ್ಯವಸ್ಥಾಪನೆ ಮತ್ತು ತಂತ್ರಜ್ಞಾನ) ಸೇವೆಗಳನ್ನೊದಗಿಸುವ ವಾಣಿಜ್ಯ ಸಂಸ್ಥೆ ಇನ್ನೊಂದು. ಶಾಲೆಯ ವಿಶ್ವಸ್ಥ ಮಂಡಳಿಯು ವಾಣಿಜ್ಯ ಸಂಸ್ಥೆಗೆ ಕಟ್ಟಡದ ಕರಾರು ಬಾಡಿಗೆ ಮತ್ತು ವ್ಯವಸ್ಥಾಪನಾ ಶುಲ್ಕವನ್ನು ಪಾವತಿಸುತ್ತದೆ. ಈ ವಿಧದಲ್ಲಿ ಶಿಕ್ಷಕರ ಸಂಬಳವನ್ನು ಮೀರಿದ ಹೆಚ್ಚುವರಿ ಬೋಧನಾ ಶುಲ್ಕವು ವಾಣಿಜ್ಯ ಸಂಸ್ಥೆಗೆ ಸೇರುತ್ತದೆ; ಆಗ ವಾಣಿಜ್ಯ ಸಂಸ್ಥೆಯು ಅದನ್ನು ಲಾಭಾಂಶದಂತೆ ಹಂಚಬಹುದು (Jayashankar (ಜಯಶಂಕರ್) 2010 ; Vora (ವೋರಾ) ಮತ್ತು Dewan (ದಿವಾನ್) 2009).

ಹಲವಾರು ಸಮಿತಿಗಳು ಮಾಧ್ಯಮಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ಮಾರ್ಗಗಳನ್ನು ಶಿಫಾರಸು ಮಾಡಿವೆ. ಅವುಗಳಲ್ಲಿ ಕೆಲವು: ರಾಷ್ಟ್ರೀಯ ಜ್ಞಾನ ಆಯೋಗದ ಶಿಫಾರಸುಗಳು, ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿ (Central Advisory Board of Education (CABE)) ಸಮಿತಿಯ ಮಾಧ್ಯಮಿಕ ಶಿಕ್ಷಣದ ಸಾರ್ವತ್ರೀಕರಣ ಕುರಿತ ವರದಿ

ಮತ್ತು ಯೋಜನಾ ಆಯೋಗದ ಕಾರ್ಯಪಡೆಯ ಮಾಧ್ಯಮಿಕ ಹಾಗೂ ಔದ್ಯೋಗಿಕ ಶಿಕ್ಷಣ ಕುರಿತ ವರದಿ (12th Five year plan (12ನೇ ಪಂಚವಾರ್ಷಿಕ ಯೋಜನೆ)). ಬಹುಮುಖ್ಯ ಶಿಫಾರಸುಗಳಲ್ಲಿ ಕೆಲವನ್ನು ಕೋಷ್ಟಕ 1.2 ರಲ್ಲಿ ಸಂಕ್ಷಿಪ್ತವಾಗಿ ಪಟ್ಟಿ ಮಾಡಲಾಗಿದೆ.

## ಉನ್ನತ ಶಿಕ್ಷಣ

ಶಾಲಾ ಶಿಕ್ಷಣ (12ನೇ ತರಗತಿ)ವನ್ನು ಮುಗಿಸಿದ ನಂತರ ನೀಡಲಾಗುವ ಶಿಕ್ಷಣವನ್ನು ಉನ್ನತ ಶಿಕ್ಷಣವೆಂದು ಕರೆಯಲಾಗುತ್ತದೆ; ಇದು ಸಾಮಾನ್ಯ ವಿಷಯಗಳಲ್ಲಿ ಶಿಕ್ಷಣ ಹಾಗೂ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣಗಳನ್ನು ಒಳಗೊಂಡಿರುತ್ತದೆ. ಪ್ರಸ್ತುತ, ಭಾರತದಲ್ಲಿ ಉನ್ನತ ಶಿಕ್ಷಣದ ಒಟ್ಟು ದಾಖಲಾತಿ ಪ್ರಮಾಣವು (GER) ಶೇಕಡ 15 ರಷ್ಟಿದೆ (MHRD 2011c); ಇದು ಜಗತ್ತಿನ ಸರಾಸರಿಯಾದ ಶೇಕಡ 23 ಕ್ಕಿಂತ ಬಹಳ ಕಡಮೆ (Planning Commission 2008a). 12ನೇ (ಪಂಚವಾರ್ಷಿಕ) ಯೋಜನೆ ಮುಗಿಯುವಷ್ಟರಲ್ಲಿ GER ಅನ್ನು ಶೇಕಡ 21 ಕ್ಕೆ ಮತ್ತು 2020 ರ ಹೊತ್ತಿಗೆ ಶೇಕಡ 30 ಕ್ಕೆ ಹೆಚ್ಚಿಸಬೇಕೆಂಬ ಗುರಿಯಿದೆ (MHRD 2011c). ವರ್ಷಗಳು ಕಳೆದಂತೆ ಅನುದಾನರಹಿತ ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆಯು ಹೆಚ್ಚಾಗಿದೆ (ಪ್ರಸ್ತುತ ಶೇಕಡ 63 ರಷ್ಟು ಸಂಸ್ಥೆಗಳು ಖಾಸಗಿಯವು) (Planning Commission 2008a). ದಾಖಲಾತಿಯಲ್ಲಿ ಸುಮಾರು ಶೇಕಡ 50 ರಷ್ಟು ಪಾಲು ಪಡೆದಿರುವ ಖಾಸಗಿ ಸಂಸ್ಥೆಗಳಲ್ಲಿ ಅವಕಾಶ ಲಭ್ಯತೆ ಉತ್ತಮಗೊಂಡಿದೆ. ಆದಾಗ್ಯೂ, ಅವು ಎಂಜಿನಿಯರಿಂಗ್, ನಿರ್ವಹಣೆ, ವೈದ್ಯಕೀಯ ಮತ್ತು ಮಾಹಿತಿ ತಂತ್ರಜ್ಞಾನ (IT) ಗಳಂತಹ ಆಯ್ದ ಕೆಲವೇ ಶೈಕ್ಷಣಿಕ ವಿಷಯಗಳಲ್ಲಿ ಕೇಂದ್ರೀಕೃತಗೊಂಡಿವೆ. ಜೊತೆಗೆ, ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳ ಹರಹು ಅಸಮತೆಯಿಂದ ಕೂಡಿದೆ; ಕೆಲವು ರಾಜ್ಯಗಳು, ಉಳಿದ ರಾಜ್ಯಗಳಿಗಿಂತಲೂ, ಅಧಿಕತರ ಬೆಳವಣಿಗೆ ಕಂಡಿವೆ (ibid.).

**ಕೋಷ್ಟಕ 1.2 ಮಾಧ್ಯಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಸಮಿತಿಗಳ ಪ್ರಮುಖ ಶಿಫಾರಸುಗಳು**

| ರಾಷ್ಟ್ರೀಯ ಜ್ಞಾನ ಆಯೋಗ | CABE ಸಮಿತಿ ವರದಿ | ಯೋಜನಾ ಆಯೋಗದ ವರದಿ (12ನೇ ಯೋಜನೆ) |
|---|---|---|

| ರಾಷ್ಟ್ರೀಯ ಜ್ಞಾನ ಆಯೋಗ | CABE ಸಮಿತಿ ವರದಿ | ಯೋಜನಾ ಆಯೋಗದ ವರದಿ (12ನೇ ಯೋಜನೆ) |
| --- | --- | --- |
| • ಸಾಧ್ಯವಾದ ಮಟ್ಟಿಗೆ ಪಂಚಾಯಿತಿಗಳಂತಹ ಸ್ಥಳೀಯ ಆಡಳಿತಗಳಿಗೆ ಶಾಲೆಗಳ ನಿರ್ವಹಣೆಯ ವಿಕೇಂದ್ರೀಕರಣ.<br>• ಖಾಸಗಿ ಶಾಲೆಗಳಿಗೆ ಮಾನ್ಯತೆ ನೀಡುವಾಗ, ಕಿರುಕುಳ ಮತ್ತು ಅಧಿಕಾರಶಾಹಿ ವಿಳಂಬವನ್ನು ಕಡಮೆ ಮಾಡಲು, ಪಾರದರ್ಶಕ ಮತ್ತು ನಿಯಮ-ಆಧಾರಿತ ಕಾರ್ಯವಿಧಾನಗಳು.<br>• ಸರ್ಕಾರಿ ಹಾಗೂ ಖಾಸಗಿ ಶಾಲೆಗಳೆರಡರ ಗುಣಮಟ್ಟವನ್ನೂ ಪರಿವೀಕ್ಷಣೆ ಮಾಡಲು ರಾಷ್ಟ್ರೀಯ ಮೌಲ್ಯಮಾಪನಾ ಘಟಕದ ನೇಮಕ; ಫಲಾಧಾರಿತ ಮೇಲ್ವಿಚಾರಣಾ ಚೌಕಟ್ಟನ್ನು ಬಳಸುವುದು.<br>• ಶಾಲಾ ತಪಾಸಣೆಯ ನವೀಕರಣೆ, ಶಿಕ್ಷಕರಿಗೆ ತರಬೇತಿ ಒದಗಿಸುವುದು, ಪಠ್ಯಕ್ರಮದ ಸುಧಾರಣೆ ಮತ್ತು ಪಠ್ಯಕ್ರಮದಲ್ಲಿ ಇಂಗ್ಲಿಷ್ ಭಾಷೆಯ ಅಳವಡಿಕೆ ಅಗತ್ಯ.<br>• ಸಂದರ್ಭಕ್ಕೆ ಹೊಂದಿಕೊಂಡ ನಿಧಿಯ ಹಂಚಿಕೆ. | • ಸಾರ್ವತ್ರಿಕ ಅವಕಾಶ ಲಭ್ಯತೆ, ಸಮಾನತೆ ಮತ್ತು ಪ್ರಸ್ತುತತೆಗಳಿಗೆ ಗಮನ ನೀಡುವುದು.<br>• ಸಂದರ್ಭಕ್ಕೆ ಹೊಂದಿಕೊಂಡಂತಹ ಪಠ್ಯಕ್ರಮ ಮತ್ತು ವೈಜ್ಞಾನಿಕವಾಗಿ ರೂಪಿಸಲ್ಪಟ್ಟ ವಿದ್ಯಾರ್ಥಿ ಮೌಲ್ಯಮಾಪನಾ ವ್ಯವಸ್ಥೆ.<br>• ಹೆಣ್ಣು ಮಕ್ಕಳು, ಪ.ಜಾತಿ/ ಪ. ಪಂಗಡ ಗಳು, ಅಲ್ಪಸಂಖ್ಯಾತರು, ಮುಂತಾದವರ ಅಂಕಿಅಂಶಗಳನ್ನು ಸಂಗ್ರಹಿಸಲು ಮಾಧ್ಯಮಿಕ ಶಿಕ್ಷಣದ ವ್ಯವಸ್ಥಾಪನಾ ಮಾಹಿತಿ ವ್ಯವಸ್ಥೆಯನ್ನು ರೂಪಿಸುವುದು.<br>• ವಿಕೇಂದ್ರೀಕೃತವಾದ ಕಿರುಹಂತದ ಯೋಜನೆ ರೂಪಿಸುವ ಅಗತ್ಯ.<br>• ಒಟ್ಟು ರಾಷ್ಟ್ರೀಯ ಉತ್ಪನ್ನದ (GDP) ಶೇ.6 ರಷ್ಟನ್ನು ಶಿಕ್ಷಣ ಕ್ಷೇತ್ರಕ್ಕಾಗಿ ನಿಗದಿ ಮಾಡುವುದು.<br>• ಶಾಲಾಶಿಕ್ಷಣದ ವಾಣಿಜ್ಯೀಕರಣವನ್ನು ನಿಗ್ರಹಿಸಬೇಕು. | • ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ್ (RMSA) ಯೋಜನೆಯನ್ನು ಸರ್ಕಾರದಿಂದ ಅನುದಾನ ಪಡೆಯುವ ಶಾಲೆಗಳಿಗೂ ಅನ್ವಯಿಸುವುದರ ಜೊತೆಗೆ ಪ್ರೌಢಶಾಲಾ ಶಿಕ್ಷಣವನ್ನೂ ಒಳಗೊಳ್ಳುವಂತೆ ವಿಸ್ತರಿಸುವುದು.<br>• ಅವಕಾಶ ಲಭ್ಯತೆಯನ್ನು ಹೆಚ್ಚಿಸಲು ಹಾಲಿ ಶಾಲೆಗಳಲ್ಲಿ ವಸತಿ ಶಾಲೆಗಳು ಹಾಗೂ ವಿದ್ಯಾರ್ಥಿನಿಲಯಗಳನ್ನು ಒದಗಿಸುವುದು.<br>• RMSA ಯೋಜನೆ ಅಡಿಯಲ್ಲಿ ನಾಗರಿಕ ನಿರ್ಮಾಣ ಕಾಮಗಾರಿಯನ್ನು ರಾಜ್ಯಗಳ ದರಪಟ್ಟಿಯ ಪ್ರಕಾರ ಕೈಗೊಳ್ಳಬೇಕು; ಏಕೆಂದರೆ ಆ ದರಗಳು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸಗೊಳ್ಳುತ್ತವೆ.<br>• ಅಸ್ತಿತ್ವದಲ್ಲಿರುವ ಮಾಧ್ಯಮಿಕ ಶಾಲೆಗಳಿಗೆ ಮೂಲಸೌಕರ್ಯಕ್ಕಾಗಿ ನೀಡುವ ಬೆಂಬಲಧನದ ಮೇಲಿನ ಆರ್ಥಿಕ ಗರಿಷ್ಠ ಮಿತಿಯನ್ನು ತೆಗೆದುಹಾಕುವುದು. ಶಾಲೆಗಳಿಗೆ ನೀಡುವ ಅನುದಾನವನ್ನು ಪ್ರತಿಶಾಲೆಗೆ ವಾರ್ಷಿಕ ರೂ.50,000 ದಿಂದ ರೂ.1,00,000 ಕ್ಕೆ ಹೆಚ್ಚಿಸುವುದು. ಈ ಅನುದಾನವನ್ನು ವಿದ್ಯುಚ್ಛಕ್ತಿ ಮತ್ತು ನೀರಿನ ಬಳಕೆಯ ವೆಚ್ಚಗಳು, ಪುಸ್ತಕಗಳು, ನಿಯತಕಾಲಿಕಗಳು, ಇತ್ಯಾದಿಗಳ ಪಾವತಿಗಾಗಿ ಬಳಸಲಾಗುವುದು.<br>• ಶಾಲೆಗಳ ಗುಣಮಟ್ಟವನ್ನು ಉತ್ತಮಪಡಿಸಲು ಜಿಲ್ಲಾಮಟ್ಟದಲ್ಲಿ ರೂ.10 ದಶಲಕ್ಷಗಳ ಮುಕ್ತ ನಿಧಿಯನ್ನು ಒದಗಿಸುವುದು.<br>. |

Source: CABE (2005); Department of School Education and Literacy (2011); NKC (2009); PRS Legislative Research.

## ಉನ್ನತ, ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣಗಳ ನಿಯಂತ್ರಣ

ಶಿಕ್ಷಣವು ಸಂವಿಧಾನದ ಸಮವರ್ತಿ-ಪಟ್ಟಿಯಲ್ಲಿರುವುದರಿಂದ ಕೇಂದ್ರ ಮತ್ತು ರಾಜ್ಯಗಳು, ಎರಡೂ ಸಹ, ಶಿಕ್ಷಣಕ್ಕೆ ಸಂಬಂಧಿಸಿದ ಕಾಯಿದೆಗಳನ್ನು ಜಾರಿಗೊಳಿಸಬಹುದು. ಜೊತೆಗೆ, ಕೇಂದ್ರವು ಉನ್ನತ ಶಿಕ್ಷಣದ ಸಂಸ್ಥೆಗಳಿಗೆ ಅನ್ವಯವಾಗುವ ಮಾನದಂಡಗಳನ್ನು ನಿರ್ಧರಿಸುವ ಅಧಿಕಾರ ಹೊಂದಿರುವ ಹಾಗೆಯೇ ರಾಜ್ಯಗಳು

ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸುವ, ನಿಯಂತ್ರಿಸುವ ಮತ್ತು ಮುಚ್ಚುವ ಅಧಿಕಾರ ಹೊಂದಿವೆ.[15] ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ಪ್ರಮುಖ ನೀತಿಗಳನ್ನು ರೂಪಿಸುತ್ತದೆ ಹಾಗೂ ವಿಶ್ವವಿದ್ಯಾಲಯ ಅನುದಾನ ಆಯೋಗ (UGC)ಕ್ಕೆ ಆರ್ಥಿಕ ಸಂಪನ್ಮೂಲವನ್ನು ಒದಗಿಸುತ್ತದೆ. ಕೇಂದ್ರ ಸರ್ಕಾರವು ಕೇಂದ್ರೀಯ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುತ್ತದೆ. ವಿಶ್ವವಿದ್ಯಾಲಯ ಅನುದಾನ ಆಯೋಗವು ಶಿಕ್ಷಣ ಸಂಸ್ಥೆಗಳನ್ನು ಸ್ವಾಯತ್ತ (deemed) ವಿಶ್ವವಿದ್ಯಾಲಯಗಳೆಂದು ಮಾನ್ಯ ಮಾಡಬಹುದು. ರಾಜ್ಯದ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳನ್ನು ಸ್ಥಾಪಿಸುವ ಜವಾಬ್ದಾರಿ ರಾಜ್ಯ ಸರ್ಕಾರಗಳದ್ದು; ಅವುಗಳ ಅಭಿವೃದ್ಧಿ ಮತ್ತು ನಿರ್ವಹಣೆಗಳಿಗಾಗಿ ರಾಜ್ಯ ಸರ್ಕಾರಗಳು ಅನುದಾನವನ್ನು ಕೂಡ ನೀಡುತ್ತವೆ (MHRD 2011b).[16]

ತಾಂತ್ರಿಕ ಶಿಕ್ಷಣವು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತಿನಿಂದ (AICTE) ನಿಯಂತ್ರಿಸಲ್ಪಡುತ್ತದೆ; ಅದಲ್ಲದೆ, ವೈದ್ಯಕೀಯ, ಕಾನೂನು ಮತ್ತು ಶುಶ್ರೂಷೆಗಳಂತಹ ಕ್ಷೇತ್ರಗಳಿಗೆ ಸಂಬಂಧಿಸಿದ ಕೋರ್ಸುಗಳನ್ನು ನಿಯಂತ್ರಿಸುವ 14 ಶಾಸನೋಕ್ತವಾದ ವೃತ್ತಿಪರ ಮಂಡಳಿ/ಪರಿಷತ್ತುಗಳೂ ಇವೆ (ibid.).[17]

## ಉನ್ನತ ಶಿಕ್ಷಣ

1956ರಲ್ಲಿ ಸ್ಥಾಪಿಸಲ್ಪಟ್ಟ ಶಾಸನೋಕ್ತ ಸಂಸ್ಥೆಯಾದ ವಿಶ್ವವಿದ್ಯಾಲಯ ಅನುದಾನ ಆಯೋಗವು, ಸಾಮಾನ್ಯ ವಿಷಯಗಳನ್ನು ಬೋಧಿಸುವಂತಹ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳನ್ನು ನಿಯಂತ್ರಿಸುವ ಅತ್ಯುನ್ನತ ಸಂಸ್ಥೆ. ಅದು ಮಾನದಂಡಗಳನ್ನು ನಿರ್ಧರಿಸುವ ಮತ್ತು ಎತ್ತಿಹಿಡಿಯುವುದರ ಜೊತೆಗೆ ಅನುದಾನವನ್ನು ಹಂಚುವ ಅಧಿಕಾರ ಹೊಂದಿದೆ. ವಿಶ್ವವಿದ್ಯಾಲಯಗಳು ಕೇಂದ್ರೀಯ, ರಾಜ್ಯ, ಖಾಸಗಿ, ಅಥವಾ ಸ್ವಾಯತ್ತ ಆಗಿರಬಹುದು. ಪದವಿ ಕೋರ್ಸುಗಳನ್ನು ನಡೆಸುವಂತಹ ಕಾಲೇಜುಗಳು ವಿಶ್ವವಿದ್ಯಾಲಯವೊಂದರ ಜೊತೆ ಸಂಯೋಜಿತಗೊಂಡಿರಬೇಕೆಂದು UGC ಷರತ್ತು ವಿಧಿಸುತ್ತದೆ. ಶಿಕ್ಷಕರು ಹೊಂದಿರಬೇಕಾದ ಕನಿಷ್ಠ ವಿದ್ಯಾರ್ಹತೆ, ವಿವಿಧ ಪದವಿಗಳನ್ನು ಪ್ರದಾನ ಮಾಡುವುದಕ್ಕಾಗಿ ಮಾರ್ಗದರ್ಶಿ ಸೂತ್ರಗಳು, ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ಪಾಲಿಸಬೇಕಾದ ಮಾನದಂಡಗಳನ್ನು UGC ಸೂಚಿಸುತ್ತದೆ. ಸಾರ್ವಜನಿಕ ಹಿತಾಸಕ್ತಿಗೆ ಪೂರಕವಾಗಿದ್ದಲ್ಲಿ UGC ಯು ವಿಶ್ವವಿದ್ಯಾಲಯಗಳ ಶುಲ್ಕವ್ಯವಸ್ಥೆಯನ್ನು ಸಹ ನಿಯಂತ್ರಿಸಬಹುದು ಹಾಗೂ ಅಂತಹ ವಿಶ್ವವಿದ್ಯಾಲಯಗಳು ಯಾವುದೇ ವಂತಿಗೆ ಸ್ವೀಕರಿಸುವುದನ್ನು ನಿಷೇಧಿಸುತ್ತದೆ .[18]

## ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ

ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತು (AICTE) ತಾಂತ್ರಿಕ ಶಿಕ್ಷಣವನ್ನು ನಿಯಂತ್ರಿಸುತ್ತದೆ; ಅದರಡಿಯಲ್ಲಿ ಎಂಜಿನಿಯರಿಂಗ್, ನಿರ್ವಹಣೆ, ಔಷಧಶಾಸ್ತ್ರ ಮತ್ತು ವಾಸ್ತುಶಿಲ್ಪದ ವಿಷಯಗಳು ಬರುತ್ತವೆ. ವಿಶ್ವವಿದ್ಯಾಲಯವೊಂದರ ಜೊತೆಗೆ ಸಂಯೋಜಿತವಾಗಿರುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಪದವಿಗಳ ಶಿಕ್ಷಣವನ್ನು ಲಭ್ಯವಾಗಿಸಬಹುದು (ಕೆಲವು ಸಂಸ್ಥೆಗಳಿಗೆ ಈ ಷರತ್ತಿನಿಂದ ವಿನಾಯಿತಿ ನೀಡಲಾಗಿದೆ). ಸಂಸ್ಥೆಯು ಡಿಪ್ಲೋಮ ಪದವಿಗಳನ್ನು ಮಾತ್ರ ಒದಗಿಸುತ್ತಿದ್ದರೆ ಸಂಯೋಜನೆಯ ಅವಶ್ಯಕತೆಯಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರತಿನಿಧಿಗಳು ಹಾಗೂ ಇತರ ತಜ್ಞರುಗಳಿಂದ

ಕೂಡಿರುವ ಕೇಂದ್ರೀಯ ಶಿಕ್ಷಣ ಸಲಹಾ ಮಂಡಳಿ(CABE)ಯು ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಮನ್ವಯದ ಕಾರ್ಯ ನಿರ್ವಹಿಸುತ್ತದೆ. ಭಾರತೀಯ ವೈದ್ಯಕೀಯ ಮಂಡಳಿ, ಭಾರತೀಯ ದಂತವೈದ್ಯಕೀಯ ಮಂಡಳಿ, ಭಾರತೀಯ ವಕೀಲರ ಪರಿಷತ್ತು ಮತ್ತು ವಾಸ್ತುಶಿಲ್ಪ ಪರಿಷತ್ತು ಮುಂತಾದ 14 ವೃತ್ತಿಪರ ಮಂಡಳಿ/ಪರಿಷತ್ತುಗಳೂ ಸಹ ಅಸ್ತಿತ್ವದಲ್ಲಿವೆ; ಇವು ಕೋರ್ಸುಗಳಿಗೆ ಮಾನ್ಯತೆ ನೀಡುವ, ವೃತ್ತಿಪರ ಶಿಕ್ಷಣ ಸಂಸ್ಥೆಗಳಿಗೆ ಬೆಂಬಲ ನೀಡುವ ಮತ್ತು ಸ್ನಾತಕಪೂರ್ವ ಪದವಿ ಕಾರ್ಯಕ್ರಮಗಳಿಗೆ ಧನಸಹಾಯ ಒದಗಿಸುವ ಕಾರ್ಯ ಮಾಡುತ್ತವೆ.

ಕೋಷ್ಟಕ 1.3 ರಲ್ಲಿ ಉನ್ನತ ಶಿಕ್ಷಣ ನೀಡುವಂತಹ ವಿವಿಧ ಬಗೆಯ ಸಂಸ್ಥೆಗಳ ಅವಲೋಕನವನ್ನು ನೀಡಲಾಗಿದೆ.

**ಕೋಷ್ಟಕ 1.3 ಉನ್ನತ ಶಿಕ್ಷಣದ ನಿಯಂತ್ರಣಾ ರೂಪುರೇಷೆ**

| ಸಂಸ್ಥೆಗಳ ವಿಧ | ಸಂಸ್ಥೆಗಳ ಸಂಖ್ಯೆ | ನಿಯಂತ್ರಣಾ ಸ್ವರೂಪ |
|---|---|---|
| ವಿಶ್ವವಿದ್ಯಾಲಯಗಳು | 452 | ಸಂಸತ್ತು ಅಥವಾ ರಾಜ್ಯ ಶಾಸನಸಭೆಗಳ ಮಸೂದೆಯ ಮೂಲಕ ಸ್ಥಾಪಿಸಲಾಗುವುದು (ಸಾರ್ವಜನಿಕ ಅಥವಾ ಖಾಸಗಿ ಆಗಿರಬಹುದು). |
| ಸ್ವಾಯತ್ತ ವಿಶ್ವವಿದ್ಯಾಲಯಗಳು | 129 | UGCಯ ಶಿಫಾರಸ್ಸಿನ ಮೇಲೆ ಕೇಂದ್ರ ಸರ್ಕಾರವು ಮಾನ್ಯತೆಯನ್ನು ಮಂಜೂರು ಮಾಡುವುದು. ತಮ್ಮದೇ ಆದ ಪಠ್ಯಕ್ರಮ, ಪ್ರವೇಶಾತಿ ಮಾನದಂಡಗಳು ಮತ್ತು ಶುಲ್ಕವ್ಯವಸ್ಥೆಗಳನ್ನು ರಚಿಸಿಕೊಳ್ಳುವ ಸ್ವಾಯತ್ತತೆ ಹೊಂದಿರುತ್ತವೆ. |
| ಕಾಲೇಜುಗಳು | 33,023 | ಸಾರ್ವಜನಿಕ ವಿಶ್ವವಿದ್ಯಾಲಯವೊಂದರ ಜೊತೆಗೆ ಕಡ್ಡಾಯವಾಗಿ ಸಂಯೋಜಿತಗೊಂಡಿರಬೇಕು (ಖಾಸಗಿ ವಿಶ್ವವಿದ್ಯಾಲಯಗಳು ಸಂಯೋಜನೆ ಮಾಡಿಕೊಳ್ಳುವಂತಿಲ್ಲ). ಅನುದಾನಿತ, ಅನುದಾನರಹಿತ ಅಥವಾ ಸ್ವಾಯತ್ತ ಆಗಿರಬಹುದು. |
| ರಾಷ್ಟ್ರೀಯ ಸ್ತರದಲ್ಲಿ ಪ್ರಾಮುಖ್ಯ ಪಡೆದಿರುವ ಸಂಸ್ಥೆಗಳು | 39 | ಉನ್ನತ ಮಟ್ಟದ ಕಾರ್ಯಸಾಧನೆ ಪ್ರದರ್ಶಿಸುತ್ತಿರುವ ಸಂಸ್ಥೆಗಳಿಗೆ (IIT ಗಳು, NIT ಗಳು, ಇತ್ಯಾದಿ) ಸಂಸತ್ತಿನ ಮಸೂದೆಯ ಮೂಲಕ ಮಾನ್ಯತೆಯನ್ನು ಮಂಜೂರು ಮಾಡಲಾಗುತ್ತದೆ. ವಿಶ್ವವಿದ್ಯಾಲಯವೊಂದರ ಜೊತೆ ಸಂಯೋಜನೆ ಹೊಂದದೆ ಪದವಿಪ್ರದಾನ ಮಾಡಬಹುದು. |
| ರಾಜ್ಯದ ಮಸೂದೆಗಳ ಅಡಿಯಲ್ಲಿ ಸ್ಥಾಪಿಸಲ್ಪಟ್ಟ ಸಂಸ್ಥೆಗಳು (ಶ್ರೇಷ್ಠ ಸಾಧನೆಯ ಕೇಂದ್ರಗಳು) | 5 | ರಾಜ್ಯದ ಮಸೂದೆಯ ಮೂಲಕ ಸ್ಥಾಪಿತವಾಗಿರುವುವು. ನಿಜಾಮರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹೈದರಾಬಾದ್; ಶ್ರೀ ವೆಂಕಟೇಶ್ವರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ತಿರುಪತಿ; ಶೇರ್-ಎ-ಕಾಶ್ಮೀರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶ್ರೀನಗರ - ಇವುಗಳನ್ನು ಒಳಗೊಂಡಿದೆ. |
| ತಾಂತ್ರಿಕ ಶಿಕ್ಷಣ (ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಂದ ಧನಸಹಾಯ ಪಡೆಯುವ ಮತ್ತು ಸ್ವಂತ ಆರ್ಥಿಕ ಸಂಪನ್ಮೂಲ ವ್ಯವಸ್ಥೆಯಿರುವ ಸಂಸ್ಥೆಗಳು) | 10,139 | ಹೊಸ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಹೊಸ ಕೋರ್ಸುಗಳನ್ನು ಪ್ರಾರಂಭಿಸಲು AICTE ಅನುಮೋದನೆ ನೀಡುವುದು. ಎಂಜಿನಿಯರಿಂಗ್, ತಂತ್ರಜ್ಞಾನ, ನಿರ್ವಹಣೆ, ವಾಸ್ತುಶಿಲ್ಪ, ನಗರ ಯೋಜನೆ, ಮತ್ತು ಔಷಧಶಾಸ್ತ್ರಗಳನ್ನು ಒಳಗೊಳ್ಳುತ್ತದೆ. |
| ವೈದ್ಯಕೀಯ, ಕಾನೂನು, ದಂತವೈದ್ಯಕೀಯ, ಶುಶ್ರೂಷೆ, ಶಿಕ್ಷಕರಿಗೆ ಶಿಕ್ಷಣ ನೀಡುವ ಸಂಸ್ಥೆಗಳು | *** | ಕೋರ್ಸುಗಳನ್ನು ಮಾನ್ಯ ಮಾಡುವ ಮತ್ತು ಸಂಸ್ಥೆಗಳಿಗೆ ಬೆಂಬಲ ನೀಡುವ, ಭಾರತೀಯ ವೈದ್ಯಕೀಯ ಮಂಡಳಿ, ಭಾರತೀಯ ವಕೀಲರ ಪರಿಷತ್ತು, ಮತ್ತು ಭಾರತೀಯ ದಂತವೈದ್ಯಕೀಯ ಮಂಡಳಿಗಳಂತಹ, 14 ವೃತ್ತಿಪರ ಮಂಡಳಿ/ಪರಿಷತ್ತುಗಳಿಂದ ನಿಯಂತ್ರಿಸಲ್ಪಡುತ್ತವೆ. |

| | | |
|---|---|---|
| ತಾಂತ್ರಿಕ ಶಿಕ್ಷಣ ಶಾಲೆಗಳು (ಪಾಲಿಟೆಕ್ನಿಕ್ ಗಳು) | 3,716 | ರಾಜ್ಯ ಸರ್ಕಾರಗಳಿಂದ ಅಥವಾ ಖಾಸಗಿ ಘಟಕವೊಂದರಿಂದ AICTE ಅನುಮೋದನೆಯೊಂದಿಗೆ ಸ್ಥಾಪಿಸಲ್ಪಡುತ್ತದೆ. ಖಾಸಗಿ ತಾಂತ್ರಿಕ ಶಿಕ್ಷಣ ಶಾಲೆಗಳನ್ನು, ಸಂಘ ಅಥವಾ ವಿಶ್ವಸ್ಥ ಮಂಡಲಿಗಳಂತಹ ಪ್ರಾಯೋಜಕ ಘಟಕವೊಂದರ ಮೂಲಕ ಸ್ಥಾಪಿಸಬೇಕಾಗುತ್ತದೆ. ಡಿಪ್ಲೋಮ ಅಥವಾ ಸರ್ಟಿಫಿಕೇಟ್ ಕೋರ್ಸುಗಳನ್ನು ಮಾತ್ರ ನೀಡಬಹುದು. |

Source: AICTE (2012); ICAI (2010); MHRD (n.d., 2011a, 2012); 'Monitoring of Technical/ Professional Institutions', Starred Question no.124, Lok Sabha, answered on 30 November 2011; 'Open & Deemed Universities', Unstarred Question no.2554, Lok Sabha, answered on 17 August 2011; 'Setting up of New Polytechnics', Unstarred Question no.316, Lok Sabha, 14 March 2012; 'Setting up Universities', Unstarred Question no.1170, Lok Sabha, 21 March 2012.

ರಾಜ್ಯ-ರಚಿತ ಶುಲ್ಕ ಮತ್ತು ಪ್ರವೇಶ ನಿಯಂತ್ರಣ ಸಮಿತಿಯು (Fee and Admission Regulatory Committee) ಅನುದಾನರಹಿತ ಸಂಸ್ಥೆಗಳ ಶುಲ್ಕವ್ಯವಸ್ಥೆ ಹಾಗೂ ಪ್ರವೇಶಾತಿ ನೀಡಿಕೆ ವಿಧಿವಿಧಾನಗಳನ್ನು ನಿಯಂತ್ರಿಸುತ್ತದೆ; ಈ ಸಮಿತಿಯು ಪ್ರತಿಯೊಂದು ಸಂಸ್ಥೆಯೂ ವಿಧಿಸಬಹುದಾದ ಶುಲ್ಕ ಮತ್ತು ವಿದ್ಯಾರ್ಥಿಗಳ ಪ್ರವೇಶಾವೇಶನವನ್ನು ನಿರ್ಧರಿಸುತ್ತದೆ. ಈ ವಿಷಯಕ್ಕೆ ಸಂಬಂಧಿಸಿದ ಬಹಳಷ್ಟು ಮೊಕದ್ದಮೆಗಳ ಕುರಿತು ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿದೆ (ನೋಡಿ ಚೌಕಟ್ಟು 1.3).

ಸದ್ಯದಲ್ಲಿ, ಸಂಸ್ಥೆಗಳಿಗೆ ಮಾನ್ಯತೆ ನೀಡುವುದು ಸ್ವಯಂಪ್ರೇರಿತ ಕ್ರಿಯೆ. UGC ಮತ್ತು AICTE ಗಳಿಂದ, ಅದೇ ಕ್ರಮದಲ್ಲಿ, ಸ್ಥಾಪಿಸಲ್ಪಟ್ಟ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಪರಿಷತ್ತು (National Assessment and Accreditation Council) ಹಾಗೂ ರಾಷ್ಟ್ರೀಯ ಮಾನ್ಯತಾ ಮಂಡಳಿ (National Board of Accreditation)ಗಳು ಸಂಸ್ಥೆಗಳಿಗೆ ಮಾನ್ಯತೆ ನೀಡುವಂತಹ ಸ್ವಾಯತ್ತ ಘಟಕಗಳು. ಪ್ರಸ್ತುತ, ಭಾರತದಲ್ಲಿ ಕಾರ್ಯಾಚರಣೆ ಮಾಡಲು ವಿದೇಶಿ ಸಂಸ್ಥೆಗಳಿಗೆ ಹಲವಾರು ವಿಧಾನಗಳ ಮೂಲಕ ಅವಕಾಶ ನೀಡಲಾಗುತ್ತಿದೆ. ಭಾರತದ ವಿಶ್ವವಿದ್ಯಾಲಯಗಳು ವಿದೇಶಿ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಪದವಿಗಳನ್ನು ಮತ್ತು ಡಿಪ್ಲೋಮಾಗಳನ್ನು ಕೊಡಮಾಡಬಹುದು. ಆದಾಗ್ಯೂ, ವಿದೇಶಿ ವಿಶ್ವವಿದ್ಯಾಲಯಗಳು ಭಾರತೀಯ ಪಾಲುದಾರರಿಲ್ಲದೆ ವಿಶ್ವವಿದ್ಯಾಲಯ ಶಾಖೆಗಳನ್ನು ಸ್ಥಾಪಿಸುವಂತಿಲ್ಲ. ತಾಂತ್ರಿಕ ಶಿಕ್ಷಣವನ್ನು ನೇರವಾಗಿ ಆಗಲೀ ಅಥವಾ ಭಾರತೀಯ ಪಾಲುದಾರರ ಸಹಯೋಗದೊಂದಿಗೆ ಆಗಲೀ ಒದಗಿಸುವಂತಹ ವಿದೇಶಿ ಸಂಸ್ಥೆಗಳನ್ನು AICTE ನಿಯಂತ್ರಿಸುತ್ತದೆ (AICTE 2005).

**ಚೌಕಟ್ಟು 1.3**

**ಖಾಸಗಿ ಸಂಸ್ಥೆಗಳು ವಿಧಿಸುವ ಶುಲ್ಕ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ ಬಹುಮುಖ್ಯ ತೀರ್ಪುಗಳು**

**ಮೋಹಿನಿ ಜೈನ್ v. ಕರ್ನಾಟಕ ರಾಜ್ಯ (1992):** ಖಾಸಗಿ ಸಂಸ್ಥೆಗಳು ಸರ್ಕಾರಿ ಕಾಲೇಜುಗಳ ಬೋಧನಾ ಶುಲ್ಕವನ್ನು ಮೀರಿ ವಿಧಿಸುವ ಶುಲ್ಕವನ್ನು ಕ್ಯಾಪಿಟೇಷನ್ ಶುಲ್ಕವೆಂದು ಪರಿಗಣಿತವಾಗಿದೆ.

**ಉನ್ನಿಕೃಷ್ಣನ್, ಜೆ.ಪಿ. v. ಆಂಧ್ರ ಪ್ರದೇಶ ರಾಜ್ಯ (1993):** ಕ್ಯಾಪಿಟೇಷನ್ ಶುಲ್ಕವನ್ನು ನಿಷೇಧಿಸಿತು ಮತ್ತು ಯೋಜನೆವೊಂದನ್ನು ರೂಪಿಸಿತು. ಆ ಯೋಜನೆಯಂತೆ, ಅನುದಾನರಹಿತ ವೃತ್ತಿಪರ ಸಂಸ್ಥೆಯ ಶೇಕಡ 50 ಸೀಟುಗಳನ್ನು ಉಚಿತ ಸೀಟುಗಳು (ಸರ್ಕಾರಿ ಸಂಸ್ಥೆಯ ಶುಲ್ಕಕ್ಕೆ ಸಮ) ಮತ್ತು ಶೇಕಡ 50 ಪಾವತಿ ಸೀಟುಗಳು ('ಉಚಿತ ಸೀಟು'ಗಳಿಗಿಂತ ಹೆಚ್ಚಿನ ಶುಲ್ಕ; ಆದರೆ ಅದಕ್ಕೆ ರಾಜ್ಯಮಟ್ಟದ ಸಮಿತಿಯೊಂದರಿಂದ ಅನುಮೋದನೆ ಪಡೆಯಬೇಕಾಗುತ್ತದೆ) ಎಂದು ಹಂಚಿತು.

**ಟಿ.ಎಮ್.ಎ.ಪೈ ಫೌಂಡೇಶನ್ v, ಕರ್ನಾಟಕ ರಾಜ್ಯ (2002):** ವಿಧಿಸಬೇಕಾದ ಶುಲ್ಕದ ಬಗೆಗಿನ ತೀರ್ಮಾನವನ್ನು, ಸರ್ಕಾರದ ಯಾವುದೇ

ಧನಸಹಾಯದ ಮೇಲೆ ಅವಲಂಬಿಸಿರದ, ಖಾಸಗಿ ಸಂಸ್ಥೆಗೇ ಬಿಡತಕ್ಕದ್ದು. ಲಾಭ ಮಾಡಿಕೊಳ್ಳುವುದು ಸಂಸ್ಥೆಯ ಉದ್ದೇಶವಾಗುವಂತಿಲ್ಲ. ಆದಾಗ್ಯೂ, ಅದು ಶಿಕ್ಷಣದ ಅಭಿವೃದ್ಧಿ ಮತ್ತು ಸಂಸ್ಥೆಯ ವಿಸ್ತರಣೆ ಇವುಗಳ ಸಲುವಾಗಿ ಸಮಂಜಸವಾದ ಹೆಚ್ಚುವರಿ ವರಮಾನವನ್ನು ಸೃಷ್ಟಿಸಬಹುದು.

**ಇಸ್ಲಾಮಿಕ್ ಅಕಾಡೆಮಿ v, ಕರ್ನಾಟಕ ರಾಜ್ಯ (2003):** ಪ್ರತಿಯೊಂದು ರಾಜ್ಯದಲ್ಲಿಯೂ, ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ನೇತೃತ್ವದ ಸಮಿತಿಯು, ಮೂರು ವರ್ಷಗಳ ಕಾಲ ಬದ್ಧವಾಗಿರುವಂತಹ ಶುಲ್ಕವ್ಯವಸ್ಥೆಯನ್ನು ಅನುಮೋದಿಸಬೇಕು.

**ಪಿ.ಎ. ಇನಾಮ್ದಾರ್ v, ಮಹಾರಾಷ್ಟ್ರ ರಾಜ್ಯ (2005):** ಪ್ರವೇಶಾತಿ ಮತ್ತು ಶುಲ್ಕವ್ಯವಸ್ಥೆಯನ್ನು ನಿಯಂತ್ರಿಸುತ್ತಿರುವ ಸಮಿತಿಗಳು ಅಸ್ತಿತ್ವದಲ್ಲಿ ಮುಂದುವರೆಯುತ್ತವೆ; ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಂತಹ ನಿಯಂತ್ರಣಕ್ಕಾಗಿ ಸೂಕ್ತ ಕಾರ್ಯತಂತ್ರವನ್ನು ರೂಪಿಸಲು ಸಾಧ್ಯವಾಗುವವರೆಗೆ ಒಂದು ತಾತ್ಕಾಲಿಕ ಕ್ರಮವಾಗಿ ಮಾತ್ರ.

ಉನ್ನತ ಶಿಕ್ಷಣವು ಹಲವಾರು ಸವಾಲುಗಳನ್ನು ಎದುರಿಸುತ್ತಿದೆ. ಅತಿಮುಖ್ಯ ಸವಾಲುಗಳಲ್ಲಿ ಕೆಲವು ಪ್ರವೇಶಾವಕಾಶ, ಗುಣಮಟ್ಟ, ಆಡಳಿತ ಮತ್ತು ಆರ್ಥಿಕ ಸಂಪನ್ಮೂಲಗಳಿಗೆ ಸಂಬಂಧಿಸಿವೆ. ಖಾಸಗಿ ವಲಯದ ನಿಯಂತ್ರಣಕ್ಕೆ ಸಂಬಂಧಿಸಿದ ಹಲವಾರು ಅಂಶಗಳು ಸಹ ಇದ್ದಿವೆ.

(a) **ಪ್ರವೇಶಾವಕಾಶ:** ಉನ್ನತ ಶಿಕ್ಷಣದಲ್ಲಿ ಭಾರತದ ಒಟ್ಟು ದಾಖಲಾತಿ ಪ್ರಮಾಣವು (GER) ಶೇಕಡ 15 ರಷ್ಟಿದೆ (MHRD 2011c). ಅಮೆರಿಕ ಸಂಯುಕ್ತ ಸಂಸ್ಥಾನ (ಶೇಕಡ 81), ಬ್ರಿಟನ್ (ಶೇಕಡ 54), ಜಪಾನ್ (ಶೇಕಡ 49), ಮತ್ತು ಮಲೇಶಿಯಾ (ಶೇಕಡ 27)ಗಳಂತಹ ಇತರ ದೇಶಗಳಲ್ಲಿ ದಾಖಲಾತಿ ಪ್ರಮಾಣ ಬಹಳ ಹೆಚ್ಚಿನ ಮಟ್ಟದಲ್ಲಿದೆ (NKC 2009).

(b) **ಗುಣಮಟ್ಟ:** ಜಗತ್ತಿನ ಅತ್ಯುತ್ತಮವಾದ 100 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಭಾರತದ ಯಾವ ವಿಶ್ವವಿದ್ಯಾಲಯವೂ ಸೇರಿಲ್ಲ ಮತ್ತು ಅತ್ಯುತ್ತಮ 200 ರ ಪಟ್ಟಿಯಲ್ಲಿ ಕೇವಲ 2 ಮಾತ್ರ ಇವೆ (*Times Higher Education* 2012). 2009 ರಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಿಂದ ನಿಯೋಜಿಸಲ್ಪಟ್ಟ ಪುನರ್ಪರಿಶೀಲನಾ ಸಮಿತಿಯು, 130 ಸ್ವಾಯತ್ತ ವಿಶ್ವವಿದ್ಯಾಲಯಗಳ ಪೈಕಿ 88 ಕಳಪೆ ಗುಣಮಟ್ಟದವೆಂಬುದನ್ನು ಕಂಡುಕೊಂಡಿತು; ಅಲ್ಲದೆ ಪ್ರಾಯೋಜಕತ್ವ ವಹಿಸಿರುವ ವಿಶ್ವಸ್ಥ ಮಂಡಳಿಯ ನಾಮನಿರ್ದೇಶಿತರು ಅಥವಾ ಸರ್ಕಾರದ ಕಾರ್ಯನಿರ್ವಾಹಕರು ಆಡಳಿತ ಮಂಡಳಿಯನ್ನು ನಿಯಂತ್ರಿಸುವುದು, ಸಂಶೋಧನೆಯ ಕಳಪೆ ಗುಣಮಟ್ಟ, ಪ್ರವೇಶಾತಿ ಪ್ರಕ್ರಿಯೆಯಲ್ಲಿ ಅನುಚಿತ ವ್ಯವಹಾರಗಳು - ಇಂತಹ ಸಮಸ್ಯೆಗಳನ್ನೂ ಗುರುತಿಸಿತು (MHRD 2009a). 2005 ರಲ್ಲಿ, ಒಂದು ಅಧಿಸೂಚನೆಯ ಮೂಲಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ರಾಜ್ಯಸರ್ಕಾರಕ್ಕೆ ಅವಕಾಶ ನೀಡುವಂತಹ, ಛತ್ತೀಸಗಢದ ಕಾನೂನೊಂದನ್ನು ಸರ್ವೋಚ್ಚ ನ್ಯಾಯಾಲಯವು ಅನೂರ್ಜಿತಗೊಳಿಸಿತು. UGCಯ ರೂಢಿಬದ್ಧ ನಿಯಮಗಳಾದ ಮೂಲಸೌಕರ್ಯ, ಬೋಧನಾ ಸೌಲಭ್ಯ, ಆರ್ಥಿಕ ಸಂಪನ್ಮೂಲ, ಮತ್ತು ಬೋಧನಾ-ಮಟ್ಟಗಳ ಪಾಲನೆ ಮಾಡದೆಯೇ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿದ್ದವು.[19] ಉತ್ತಮ ಗುಣಮಟ್ಟದ ಅಧ್ಯಾಪಕ ವರ್ಗದ ಕೊರತೆಯೂ ಸಮಸ್ಯೆಗೆ ಗಮನಾರ್ಹವಾಗಿ ಕಾರಣೀಭೂತವಾಗಿದೆ (MHRD 2011b).

(c) **ಧನಸಹಾಯ:** ಭಾರತದಲ್ಲಿರುವ ವಿಶ್ವವಿದ್ಯಾಲಯಗಳು ಹಣಕಾಸಿನ ಇತಿಮಿತಿಗಳನ್ನು ಎದುರಿಸುತ್ತಿವೆ. ಉನ್ನತ ಶಿಕ್ಷಣಕ್ಕಾಗಿ ಒಟ್ಟು ರಾಷ್ಟ್ರೀಯ ಉತ್ಪನ್ನದ(GDP) ಶೇಕಡ 0.7ನ್ನು ಮಾತ್ರ ವ್ಯಯಿಸಲಾಗುತ್ತಿದೆ (NKC 2009); ಇದು ಅಮೆರಿಕ ಸಂಯುಕ್ತ ಸಂಸ್ಥಾನ (ಶೇಕಡ 2.9), ಬ್ರಿಟನ್ (ಶೇಕಡ 1.3) ಮತ್ತು ಚೀನಾ

(ಶೇಕಡ 1.5)ಗಳಂತಹ ಇತರ ದೇಶಗಳಿಗಿಂತ ಕಡಮೆ ಇದೆ (NBS of China (National Bureau of Statistics); NCES (National Center for Education Statistics) 2010: 110-11). ಸಾಮಾನ್ಯವಾಗಿ, ನಿರ್ವಹಣಾ ವೆಚ್ಚದ ಸುಮಾರು ಶೇಕಡ 75ರಷ್ಟು ಸಂಬಳ ಮತ್ತು ನಿವೃತ್ತಿ ವೇತನಗಳಿಗಾಗಿ ವ್ಯಯವಾಗುತ್ತದೆ, ಹಾಗೂ ಶೇಕಡ 15ರಷ್ಟು ಬಾಡಿಗೆಗಳು, ವಿದ್ಯುತ್ ಶುಲ್ಕ, ದೂರವಾಣಿ ವೆಚ್ಚಗಳು ಮತ್ತು ಪರೀಕ್ಷೆಗಳಂತಹ ಅಗತ್ಯಗಳಿಗೆ ಸರಿಹೋಗುತ್ತದೆ (NKC 2009).

(d) **ಆಡಳಿತ:** ಭಾರತದ ರಾಷ್ಟ್ರೀಯ ಶಿಕ್ಷಣ ನೀತಿ(1986)ಯು ಶೈಕ್ಷಣಿಕ ಸಂಸ್ಥೆಗಳ ನಿರ್ವಹಣೆಯಲ್ಲಿ, ವಿಕೇಂದ್ರೀಕರಣ, ಶೈಕ್ಷಣಿಕ ಸಂಸ್ಥೆಗಳ ಸ್ವಾಯತ್ತತೆ ಮತ್ತು ಹೊಣೆಗಾರಿಕೆಯ ತತ್ವಗಳು ಅಗತ್ಯವೆಂದು ಒತ್ತಿಹೇಳಿತು. ಆದಾಗ್ಯೂ, ಕಾರ್ಯರೂಪಕ್ಕೆ ತರುವಲ್ಲಿ ಬಯಸಿದ್ದ ಗುರಿಗಳ ಮತ್ತು ತತ್ವಗಳ ಮಟ್ಟ ತಲುಪಲಿಲ್ಲ. ನಿಯಂತ್ರಣಾ ಘಟಕಗಳು ಮಾನ್ಯತೆ ಮಂಜೂರು ಮಾಡುವುದಕ್ಕಾಗಿ ತೊಡಕಿನ ಕಾರ್ಯವಿಧಾನಗಳನ್ನು ಅನುಸರಿಸುತ್ತವೆ ಮತ್ತು ದೊಡ್ಡ ಮಟ್ಟದ ಭ್ರಷ್ಟಾಚಾರ ನಡೆಯುತ್ತಿದೆ (GoI 2006; MHRD 2019a). ಸ್ವಾಯತ್ತತೆ, ಹೊಣೆಗಾರಿಕೆ ಮತ್ತು ಪಾರದರ್ಶಕತೆಗಳನ್ನು ಉತ್ತೇಜಿಸಲು ಪರಿಹರಿಸಬೇಕಾಗಿರುವ ಕೆಲವು ಸಮಸ್ಯೆಗಳೆಂದರೆ: ಸರ್ಕಾರದ ಹಸ್ತಕ್ಷೇಪ, ವಿಶ್ವವಿದ್ಯಾಲಯದ ಆಡಳಿತ ಮಂಡಳಿಗಳ ದೊಡ್ಡಗಾತ್ರ, ಹೊಸ ವಿಶ್ವವಿದ್ಯಾಲಯಗಳನ್ನು ಆರಂಭಿಸುವುದಕ್ಕೆ ಇರುವ ಅಡೆತಡೆಗಳು, ಮತ್ತು ಕಾಲೇಜುಗಳ ಸಂಯೋಜನಾ ವ್ಯವಸ್ಥೆ.

(e) **ಖಾಸಗಿ ಕ್ಷೇತ್ರದ ನಿಯಂತ್ರಣ:** ಸರ್ವೋಚ್ಚ ನ್ಯಾಯಾಲಯದ ಹಲವಾರು ತೀರ್ಪುಗಳು, ಖಾಸಗಿ ಸಂಸ್ಥೆಗಳ ಮೇಲೆ ವಿವಿಧ ಪ್ರಮಾಣದ ಹತೋಟಿಯನ್ನು ಆದೇಶಿಸುವ ಮೂಲಕ, ಲಾಭಕೋರತನವನ್ನು ಮಟ್ಟಹಾಕುವ ಪ್ರಯತ್ನ ಮಾಡಿದವು. ಮಧ್ಯ ಪ್ರದೇಶ, ಆಂಧ್ರ ಪ್ರದೇಶ, ಗುಜರಾತ್, ಕರ್ನಾಟಕ ಮತ್ತು ಒರಿಸ್ಸಾದಂತಹ ರಾಜ್ಯಗಳು ವೃತ್ತಿಪರ ಶೈಕ್ಷಣಿಕ ಸಂಸ್ಥೆಗಳ ಶುಲ್ಕ ವ್ಯವಸ್ಥೆಯ ಅನುಮೋದನೆಗಾಗಿ ಸಮಿತಿಗಳನ್ನು ರಚಿಸುವಂತಹ ಕಾನೂನುಗಳನ್ನು ವಿಧಿಸಿದವು.[20] ಆದಾಗ್ಯೂ, ಯಶ್ ಪಾಲ್ ಸಮಿತಿಯ ವರದಿಯ ಪ್ರಕಾರ ಕ್ಯಾಪಿಟೇಷನ್ ಶುಲ್ಕ, ಕೋರ್ಸಿಗನುಗುಣವಾಗಿ ರೂ.0.1 ರಿಂದ 1.2 ದಶಲಕ್ಷಗಳವರೆಗೆ, ವಿಧಿಸುವುದನ್ನು ನಿಲ್ಲಿಸಿಲ್ಲ (MHRD 2009b). ಮತ್ತೊಂದು ಕಡೆ, ಸಂಸ್ಥೆಯ ಆರ್ಥಿಕ ದೃಢತೆಯನ್ನು ಖಚಿತಪಡಿಸಲು ಕ್ಯಾಪಿಟೇಷನ್ ಶುಲ್ಕ ಅಗತ್ಯವೆಂದು ಖಾಸಗಿ ಸಂಸ್ಥೆಗಳು ಪ್ರತಿಪಾದಿಸುತ್ತವೆ. ಕೆಲವು ತಜ್ಞರು ಈ ರೀತಿ ಕೂಡ ವಾದಿಸುತ್ತಾರೆ: ಶಿಕ್ಷಣ ಕ್ಷೇತ್ರದಲ್ಲಿ ಲಾಭರಹಿತ ಘಟಕಗಳು ಮಾತ್ರ ಕಾರ್ಯನಿರ್ವಹಿಸಲು ಅವಕಾಶ ನೀಡಿದರೆ ಗುಣಮಟ್ಟ ಖಾತ್ರಿಪಡಿಸಲು ಆಗುವುದಿಲ್ಲ; ಅಷ್ಟೇ ಅಲ್ಲದೆ ಪೂರೈಕೆಯೂ ಹೆಚ್ಚಾಗುವುದಿಲ್ಲ ಅಥವಾ ಕ್ಯಾಪಿಟೇಷನ್ ಶುಲ್ಕ ವಿಧಿಸುವುದನ್ನೂ ನಿಗ್ರಹಿಸಲಾಗುವುದಿಲ್ಲ (Basu (ಬಾಸು) 2009; Debroy (ಡೆಬ್ರಾಯ್) 2008; Mehta (ಮೆಹ್ತಾ) 2005). ಲಾಭರಹಿತ ಸ್ಥಾನಮಾನವು ಅಪ್ರಾಮಾಣಿಕ ಹೂಡಿಕೆದಾರರಿಗೆ ಪ್ರಚೋದಕವಾಗಿ ಇರಬಹುದು; ಏಕೆಂದರೆ ಅಂತಹ ಘಟಕಗಳು ತೆರಿಗೆ ವಿನಾಯಿತಿ ಪಡೆಯುತ್ತವೆಯಾದ್ದರಿಂದ ಅಕ್ರಮ ಆರ್ಥಿಕ ವ್ಯವಹಾರಗಳನ್ನು ನಡೆಸುವುದು ಸುಲಭವಾಗುತ್ತದೆ (Kapur (ಕಪೂರ್) ಮತ್ತು Mehta (ಮೆಹ್ತಾ) 2004).

(f) **ಖಾಸಗಿ ಸಂಸ್ಥೆಗಳಲ್ಲಿ ಪ್ರವೇಶಾತಿ:** ಇದು ಕೂಡ ಸರ್ಕಾರದ ನಿಯಂತ್ರಣಕ್ಕೊಳಪಟ್ಟಿದೆ. ಒಂದು ನಿರ್ದಿಷ್ಟ ಸಂಖ್ಯೆಯ ಸೀಟುಗಳನ್ನು ಸರ್ಕಾರದ ಸೀಟುಗಳೆಂದು ಮೀಸಲಿಡಲಾಗುತ್ತದೆ; ವಿದ್ಯಾರ್ಥಿಗಳು ಈ ಸೀಟುಗಳಿಗೆ ಸರ್ಕಾರದ ಸಂಸ್ಥೆಗಳು ವಿಧಿಸುವುದಕ್ಕೆ ಸಮನಾದ ಶುಲ್ಕವನ್ನು ಪಾವತಿಸುತ್ತಾರೆ. ಸುಮಾರು ಶೇಕಡ 15

ರಷ್ಟು ಸೀಟುಗಳನ್ನು ವ್ಯವಸ್ಥಾಪಕರ ಪಾಲೆಂದು ವರ್ಗೀಕರಿಸಲಾಗುತ್ತದೆ; ವಿದ್ಯಾರ್ಥಿಗಳು ಈ ಸೀಟುಗಳಿಗೆ ಶುಲ್ಕ ನಿಯಂತ್ರಣಾ ಸಮಿತಿಯು ಆದೇಶಿಸಿದಷ್ಟು ಶುಲ್ಕವನ್ನು ಪಾವತಿಸುತ್ತಾರೆ. ಸಂವಿಧಾನದ 93ನೇ ತಿದ್ದುಪಡಿಯು ಖಾಸಗಿ ಸಂಸ್ಥೆಗಳಲ್ಲಿ ಪ.ಜಾತಿ./ಪ. ಪಂಗಡ/ ಇತರ ಹಿಂದುಳಿದ ಜಾತಿಗಳಿಗೆ ಸೀಟುಗಳನ್ನು ಕಾಯ್ದಿರಿಸುವ ಸಲುವಾಗಿ ಕಾನೂನುಗಳನ್ನು ಜಾರಿಗೊಳಿಸಲು ಸಂಸತ್ತು ಮತ್ತು ರಾಜ್ಯ ಶಾಸನಸಭೆಗಳಿಗೆ ಅಧಿಕಾರ ನೀಡುತ್ತದೆ.

2009ರಲ್ಲಿ, ಎರಡು ಉನ್ನತ ಮಟ್ಟದ ಸಮಿತಿಗಳು - ರಾಷ್ಟ್ರೀಯ ಜ್ಞಾನ ಆಯೋಗ (NKC) ಮತ್ತು ಯಶ್ ಪಾಲ್ ಸಮಿತಿ - ಉನ್ನತ ಶಿಕ್ಷಣ ಕ್ಷೇತ್ರವನ್ನು ಸುಧಾರಿಸಿ ನವೀಕರಿಸುವ ಹಲವಾರು ಮಾರ್ಗಗಳನ್ನು ಸೂಚಿಸಿದ್ದವು. ಪ್ರಮುಖ ಶಿಫಾರಸುಗಳನ್ನು ಕೋಷ್ಟಕ 1.4ರಲ್ಲಿ ಸಂಕ್ಷಿಪ್ತಗೊಳಿಸಿ ನೀಡಲಾಗಿದೆ.

**ಕೋಷ್ಟಕ 1.4  ರಾಷ್ಟ್ರೀಯ ಜ್ಞಾನ ಆಯೋಗ ಮತ್ತು ಯಶ್ ಪಾಲ್ ಸಮಿತಿಯ ಬಹುಮುಖ್ಯ ಶಿಫಾರಸುಗಳು**

| ರಾಷ್ಟ್ರೀಯ ಜ್ಞಾನ ಆಯೋಗ | ಯಶ್ ಪಾಲ್ ಸಮಿತಿ |
|---|---|
| **ನಿಯಂತ್ರಣಾ ರೂಪುರೇಷೆ**<br>• ಸಂಸತ್ತಿನ ಕಾಯಿದೆಯೊಂದರ ಮೂಲಕ ಉನ್ನತ ಶಿಕ್ಷಣಕ್ಕಾಗಿ ಸ್ವತಂತ್ರ ನಿಯಂತ್ರಣಾ ಪ್ರಾಧಿಕಾರ (Independent Regulatory Authority for Higher Education (IRAHE)) ವನ್ನು ಸ್ಥಾಪಿಸುವುದು; ಅದು ಮಾನದಂಡಗಳನ್ನು ರೂಪಿಸುತ್ತದೆ ಮತ್ತು ಹೊಸ ಸಂಸ್ಥೆಗಳಿಗಾಗಿ ಅರ್ಹತಾ ಪ್ರಮಾಣವನ್ನು ನಿರ್ಧರಿಸುತ್ತದೆ.<br>• ಅದು ವಿವಾದಗಳನ್ನು ಸಹ ಬಗೆಹರಿಸುತ್ತದೆ ಹಾಗೂ ಮಾನ್ಯತಾ ನಿಯೋಗಗಳಿಗೆ (Accreditation agencies) (ಸಾರ್ವಜನಿಕ ಮತ್ತು ಖಾಸಗಿ ಎರಡೂ) ಪರವಾನಗಿ ನೀಡುವಿಕೆಯ ಮೇಲ್ವಿಚಾರಣೆ ನಡೆಸುತ್ತದೆ.<br>• UGC ಯು ಸಾರ್ವಜನಿಕ ನಿಧಿಯನ್ನು ಹಂಚುವ ಕಾರ್ಯ ಮಾತ್ರ ಮಾಡಬೇಕು. ವೃತ್ತಿಯನ್ನು ಪ್ರವೇಶಿಸ ಬಯಸುವವರಿಗೆ ಪರವಾನಗಿಗಳನ್ನು ಒದಗಿಸುವಂತಹ ಭಾರತೀಯ ವೈದ್ಯಕೀಯ ಮಂಡಳಿ ಮತ್ತು ಭಾರತೀಯ ವಕೀಲರ ಪರಿಷತ್ತುಗಳನ್ನು ಹೊರತುಪಡಿಸಿ, ಎಲ್ಲಾ ವೃತ್ತಿಪರ ಮಂಡಳಿ/ಪರಿಷತ್ತುಗಳನ್ನೂ ರದ್ದುಪಡಿಸುವುದು. | • ಸಂವಿಧಾನದ ತಿದ್ದುಪಡಿಯೊಂದರ ಮೂಲಕ ರಾಷ್ಟ್ರೀಯ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಆಯೋಗ(NCHER)ವನ್ನು ಸ್ಥಾಪಿಸುವುದು; ಇದು UGC, AICTE, NCTE ಮತ್ತು ದೂರಶಿಕ್ಷಣ ಮಂಡಳಿ (Distance Education Council ((DEC))ಗಳಿಗೆ ಬದಲಿಯಾಗಿ ಕಾರ್ಯನಿರ್ವಹಿಸುವುದು.<br>• ಭಾರತೀಯ ವೈದ್ಯಕೀಯ ಮಂಡಳಿ ಮತ್ತು ಭಾರತೀಯ ವಕೀಲರ ಪರಿಷತ್ತುಗಳಂತಹ ವೃತ್ತಿಪರ ಮಂಡಳಿ/ಪರಿಷತ್ತುಗಳು ಅರ್ಹತಾ ಪರೀಕ್ಷೆಗಳನ್ನು ಆಯೋಜಿಸಬೇಕು.<br>• ಮಾನ್ಯತಾ ಪ್ರಕ್ರಿಯೆಗೆ NCHER ನಿಯಮಗಳನ್ನು ರೂಪಿಸಬೇಕು; ಮತ್ತು, ಸರ್ಕಾರದಿಂದ ಸ್ವತಂತ್ರವಾದಂತಹ, ಮಾನ್ಯತಾ ನಿಯೋಗಗಳ ಪ್ರಮಾಣೀಕರಣ ಮಾಡಬೇಕು.<br>• ವಿವಾದಗಳಿಗೆ ತೀರ್ಪು ನೀಡಲು ರಾಷ್ಟ್ರೀಯ ಶಿಕ್ಷಣ ನ್ಯಾಯಮಂಡಳಿಯನ್ನು ರಚಿಸಬೇಕು. |
| **ಪ್ರವೇಶಾವಕಾಶ**<br>• 50 ರಾಷ್ಟ್ರೀಯ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಮೂಲಕ ಹಾಗೂ ಸಾಬೀತು ಮಾಡಲ್ಪಟ್ಟಂತಹ ಪ್ರಗತಿ ದಾಖಲಿಸಿರುವ ಪ್ರತ್ಯೇಕ ಕಾಲೇಜುಗಳಿಗೆ ಅಥವಾ ಕಾಲೇಜುಗಳ ಸಮೂಹಕ್ಕೆ ಸ್ವಾಯತ್ತತೆಯನ್ನು ನೀಡುವ ಮೂಲಕ ವಿಶ್ವವಿದ್ಯಾಲಯಗಳ ಸಂಖ್ಯೆಯನ್ನು 1500 ಕ್ಕೆ ಹೆಚ್ಚಿಸುವುದು.<br>• ವಿದ್ಯಾರ್ಥಿಯೊಬ್ಬನ ಶುಲ್ಕ ಪಾವತಿಸುವ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳದೆ ಪ್ರವೇಶಾತಿ ನೀಡುವುದು. ರಾಷ್ಟ್ರೀಯ ವಿದ್ಯಾರ್ಥಿವೇತನ ಯೋಜನೆಯೊಂದನ್ನು ಅಸ್ತಿತ್ವಕ್ಕೆ ತರುವುದು ಹಾಗೂ, ಕನಿಷ್ಠ ಎರಡು ಬ್ಯಾಂಕುಗಳು ಯಾವುದೇ ಜಾಮೀನಿಲ್ಲದೆ ಸಾಲ ನೀಡಲು ಸಿದ್ಧವಿದ್ದರೆ, ಸಂಸ್ಥೆಗಳು ತಮ್ಮ ಶುಲ್ಕವನ್ನು ತಾವೇ ನಿಗದಿಮಾಡಿಕೊಳ್ಳಲು ಅವಕಾಶ ನೀಡುವುದು. ಅಭಾವ ಸೂಚ್ಯಂಕ (deprivation index) ವನ್ನು ರೂಪಿಸುವ ಮೂಲಕ ವರಮಾನ, ಲಿಂಗ ಮತ್ತು ಪ್ರಾದೇಶಿಕ ತಾರತಮ್ಯಗಳನ್ನು ಉದ್ದೇಶಿಸಬೇಕು. | • ಸಂಸ್ಥೆಗಳನ್ನು (ಸಾರ್ವಜನಿಕ ಮತ್ತು ಖಾಸಗಿ ಎರಡೂ) ಸ್ಥಾಪಿಸುವ ಸಲುವಾಗಿ ತರ್ಕಬದ್ಧ ಮತ್ತು ಸಮಂಜಸವಾದ ನಿಬಂಧನೆಗಳನ್ನು ನಿಯಂತ್ರಕ ಕಾರ್ಯವಿಧಾನವು (Regulatory Mechanism) ರಚಿಸಬೇಕು. ಶಿಕ್ಷಣವು ವಿದ್ಯಾರ್ಥಿವೇತನಗಳ ಮೂಲಕವಾಗಲೀ ಅಥವಾ ಸಾಲಗಳ ಮೂಲಕವಾಗಲೀ ಕೈಗೆಟುವಂತೆ ಮಾಡಬೇಕು.<br>• ಅತ್ಯುತ್ತಮ ವಿದೇಶಿ ವಿಶ್ವವಿದ್ಯಾಲಯಗಳಿಗೆ ಮಾತ್ರ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಅನುಮತಿ ನೀಡಬೇಕು.<br>• ಉತ್ತಮ ಕಾಲೇಜುಗಳನ್ನು ವಿಶ್ವವಿದ್ಯಾಲಯದ ಸ್ಥಾನಕ್ಕೆ ಉನ್ನತೀಕರಿಸಬೇಕು. ಹಲವು ಕಾಲೇಜುಗಳನ್ನು ಸಮೂಹಗಳಾಗಿ ಒಗ್ಗೂಡಿಸಬಹುದು ಮತ್ತು ಅವುಗಳಿಗೆ ವಿಶ್ವವಿದ್ಯಾಲಯಗಳಾಗಿ ಮಾನ್ಯತೆ ನೀಡಬಹುದು. |

| | |
|---|---|
| **ಗುಣಮಟ್ಟ**<br>• ಅಸ್ತಿತ್ವದಲ್ಲಿರುವ ವಿಶ್ವವಿದ್ಯಾಲಯಗಳು: ಪಠ್ಯಕ್ರಮಗಳನ್ನು ಪರಿಷ್ಕರಿಸುವುದು, ಕೋರ್ಸ್ ಕ್ರೆಡಿಟ್ ಪದ್ಧತಿಯನ್ನು (course credit system) ಅನುಸರಿಸುವುದು, ಸಂಶೋಧನೆಯನ್ನು ಪ್ರೋತ್ಸಾಹಿಸುವುದು, ಅಧ್ಯಾಪಕ ವರ್ಗಕ್ಕೆ ಕಾರ್ಯನಿರ್ವಹಣಾ ಪ್ರೋತ್ಸಾಹಕಗಳನ್ನು (performance incentives) ನೀಡುವುದು.<br>• ಕಾಲೇಜುಗಳು: ಉನ್ನತ ಶ್ರೇಣಿಯ ಕಾಲೇಜುಗಳನ್ನು ಸಂಯೋಜನಾ ವ್ಯವಸ್ಥೆಯಿಂದ ಸ್ವಾಯತ್ತತೆಗೆ ಬದಲಿಸುವುದು, ಕೆಲವನ್ನು ಸಮುದಾಯ ಕಾಲೇಜುಗಳಾಗಿ ಮರುವಿನ್ಯಾಸಗೊಳಿಸುವುದು ಮತ್ತು ಕೇಂದ್ರೀಯ ಸ್ನಾತಕಪೂರ್ವ ಪದವಿ ಶಿಕ್ಷಣ ಮಂಡಳಿಯೊಂದನ್ನು (Central Board of Undergraduate Education) ಸ್ಥಾಪಿಸುವುದು.<br>• ಸಂಸ್ಥೆಗಳ ಮಾನ್ಯತಾ ಮಟ್ಟವನ್ನೂ ಒಳಗೊಂಡಂತೆ, ಅವುಗಳ ಮಾಹಿತಿ ಬಹಿರಂಗಪಡಿಸುವಿಕೆಯ ನಿಯಮಗಳನ್ನು ಕಠಿಣಗೊಳಿಸುವುದು. ವಿದೇಶಿ ವಿಶ್ವವಿದ್ಯಾಲಯಗಳಿಗೆ ಭಾರತದಲ್ಲಿ ಕಾರ್ಯನಿರ್ವಹಿಸಲು ಅವಕಾಶ ನೀಡುವುದರ ಮೂಲಕ ಸ್ಪರ್ಧಾತ್ಮಕವಾಗಿ ಗುಣಮಟ್ಟವನ್ನು ಹೆಚ್ಚಿಸುವುದು. | • ಸಂಸ್ಥೆಗಳು ತಮ್ಮ ಸ್ವಂತ ಗುರಿಗಳನ್ನು ನಿಶ್ಚಯಿಸಿಕೊಳ್ಳಲು ಹಾಗೂ ಒಂದು ನಿಶ್ಚಿತ ಕಾಲಾವಧಿಯಲ್ಲಿ ಅವುಗಳನ್ನು ಸಾಧಿಸಲು ಅವಕಾಶ ನೀಡುವುದು. ಪ್ರಗತಿಗೆ ಅವಕಾಶ ಕಲ್ಪಿಸುವ ತತ್ವಗಳು ಮತ್ತು ಅಧ್ಯಯನದ ಗಹನತೆಯನ್ನು ಆಧರಿಸಿ ಪಠ್ಯಕ್ರಮದಲ್ಲಿ ಸುಧಾರಣೆ ತರುವುದು. ವಿಶ್ವವಿದ್ಯಾಲಯಗಳ ಸ್ನಾತಕಪೂರ್ವ ವ್ಯಾಸಂಗ ಕಾರ್ಯಕ್ರಮಗಳು ಅರ್ಥಪೂರ್ಣವಾಗಿರಬೇಕು.<br>• ರಾಜ್ಯ ವಿಶ್ವವಿದ್ಯಾಲಯಗಳ ಗಾತ್ರವನ್ನು ಪರಿಣಾಮಕಾರಿಯಾಗುವಂತೆ ಮರುಹೊಂದಿಸಬೇಕು. ಎಲ್ಲ ಖಾಸಗಿ ಸಂಸ್ಥೆಗಳೂ ಕಡ್ಡಾಯವಾಗಿ ಅಧಿಕೃತ ಮಾನ್ಯತೆ ಪಡೆದಿರಬೇಕು. ಸ್ವಾಯತ್ತ ವಿಶ್ವವಿದ್ಯಾಲಯಗಳಾಗಿ ಮಾನ್ಯತೆ ನೀಡುವುದನ್ನು ತಾತ್ಕಾಲಿಕವಾಗಿ ತಡೆಹಿಡಿಯಬೇಕು.<br>• ತುಲನಾತ್ಮಕವಾದ ಗರಿಷ್ಠ ವೇತನ ಮತ್ತು ಅಭಿವೃದ್ಧಿಗೊಂಡ ಮೂಲಸೌಕರ್ಯಗಳು ಅಗತ್ಯ. ಕಳಪೆ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುವವರನ್ನು ಗುರುತಿಸಲು ವಿದ್ಯಾರ್ಥಿಗಳ ಪ್ರತಿಕ್ರಿಯೆಗಳನ್ನು (feedback) ಪಡೆದುಕೊಳ್ಳಬೇಕು. |
| **ಆಡಳಿತ**<br>• ಆಡಳಿತ ರಚನಾಕ್ರಮವು ವಿಶ್ವವಿದ್ಯಾಲಯಗಳ ಸ್ವಾಯತ್ತತೆಯನ್ನು ಉಳಿಸಿಕೊಳ್ಳಬೇಕು ಹಾಗೂ ಹೊಣೆಗಾರಿಕೆಯನ್ನು ಖಚಿತಪಡಿಸಬೇಕು. ಉಪಕುಲಪತಿಗಳನ್ನು ಶೋಧನಾ ಪ್ರಕ್ರಿಯೆ ಮತ್ತು ಸಮಾನಸ್ಕಂಧರ ಅಭಿಪ್ರಾಯ (peer judgement)ದ ಮೂಲಕ ಮಾತ್ರವೇ ನೇಮಿಸಬೇಕು. ವಿಶ್ವವಿದ್ಯಾಲಯಗಳ ನ್ಯಾಯಾಲಯಗಳು, ಶೈಕ್ಷಣಿಕ ತಜ್ಞರ ಪರಿಷತ್ತುಗಳು ಮತ್ತು ಕಾರ್ಯನಿರ್ವಾಹಕರು - ಇವುಗಳ ಅಧಿಕ ಗಾತ್ರ ಮತ್ತು ಸಂಯೋಜನೆಗಳೇ (composition) ಪ್ರತಿಬಂಧಕಗಳಾಗಿವೆ. ಶೈಕ್ಷಣಿಕ ತಜ್ಞರ ಪರಿಷತ್ತುಗಳ ಸ್ಥಾಯಿ ಸಮಿತಿಗಳು ತೀರ್ಮಾನಗಳನ್ನು ತೆಗೆದುಕೊಳ್ಳಬೇಕು.<br>• ವಿಶ್ವವಿದ್ಯಾಲಯಗಳನ್ನು ರಾಜಕೀಯಗೊಳಿಸುವ ಸಮಸ್ಯೆಯನ್ನು ಉದ್ದೇಶಿಸಬೇಕು. | • ಆಡಳಿತ ರಚನಾಕ್ರಮವು ವಿಶ್ವವಿದ್ಯಾಲಯಗಳ ಸ್ವಾಯತ್ತತೆಯನ್ನು ಉಳಿಸಿಕೊಳ್ಳಬೇಕು. ಶೈಕ್ಷಣಿಕ ನಿರ್ವಹಣೆಯಲ್ಲಿ ನಿಪುಣತೆ ಬೆಳೆಸುವುದರ ಜೊತೆಗೆ ಅದನ್ನು ಶೈಕ್ಷಣಿಕ ಅಡಳಿತದಿಂದ ಬೇರ್ಪಡಿಸಬೇಕು.<br>• ಆಡಳಿತ ರಚನಾಕ್ರಮದಲ್ಲಿ ರಾಜಕಾರಣಿಗಳನ್ನು ಸೇರಿಸದಿರುವುದು ಮತ್ತು ಸರ್ಕಾರದ ಸೀಮಿತ ಪ್ರತಿನಿಧಿತ್ವ ಅಗತ್ಯ.<br>• ಬೋಧಕರಿಗೆ ತಮ್ಮ ಕೋರ್ಸುಗಳನ್ನು ರೂಪಿಸುವ ಮತ್ತು ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡುವ ಸ್ವಾತಂತ್ರ್ಯ ಇರಬೇಕು. |
| **ಆರ್ಥಿಕ ಸಂಪನ್ಮೂಲ**<br>• 2012ರ ವೇಳೆಗೆ ಸರ್ಕಾರದ ಧನಸಹಾಯವು ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇಕಡ 1.5 ರಷ್ಟಾಗಬೇಕು. ಭೂಮಿಯಂತಹ ವಿಶ್ವವಿದ್ಯಾಲಯಗಳ ಆಸ್ತಿಯನ್ನು ವರಮಾನ ಉತ್ಪಾದಿಸುವ ರೀತಿಯಲ್ಲಿ ನಿರ್ವಹಣೆ ಮಾಡಬೇಕು.<br>• ಶುಲ್ಕವನ್ನು ಒಟ್ಟು ವೆಚ್ಚದ ಶೇಕಡ 20 ರಷ್ಟನ್ನಾದರೂ ಭರಿಸಲು ಸಾಧ್ಯವಾಗುವಂತೆ ಪರಿಣಾಮಕಾರಿಯಾಗಿ ಬೇರೆ ರೀತಿಯಲ್ಲಿ ವ್ಯವಸ್ಥೆಗೊಳಿಸಬೇಕು. UGC ಯ ಅನುದಾನ-ಸಹಾಯ ಮಂಜೂರಾತಿಯನ್ನು ಕಡಮೆ ಮಾಡಬಾರದು ಹಾಗೂ ಅವಕಾಶವಂಚಿತ ವಿದ್ಯಾರ್ಥಿಗಳು ಶುಲ್ಕ ಮನ್ನಾದ ಜೊತೆಗೆ ವಿದ್ಯಾರ್ಥಿವೇತನಗಳನ್ನೂ ಪಡೆಯಬೇಕು.<br>• ವಿಶ್ವವಿದ್ಯಾಲಯ ಮತ್ತು ದಾನಿಗಳಿಗೆ ಉತೇಜಕಗಳ ಮೂಲಕ ದಾನದ | • ದಾನದ ರೂಪದಲ್ಲಿ ಬರುವ ಕೊಡುಗೆಗಳನ್ನೂ ಸೇರಿದಂತೆ, ಆರ್ಥಿಕ ಸಂಪನ್ಮೂಲಕ್ಕಾಗಿ ಹೆಚ್ಚುವರಿ ಮೂಲಗಳನ್ನು ಹುಡುಕಿಕೊಳ್ಳುವುದು ಅಗತ್ಯ. ಹಳೆಯ ವಿದ್ಯಾರ್ಥಿಗಳು ಇಂತಹ ಮೂಲಗಳಾಗುವುದನ್ನು ಸಾಧ್ಯವಾಗಿಸಬೇಕು.<br>• ವಿಶ್ವವಿದ್ಯಾಲಯಗಳು ಸರ್ಕಾರೇತರ ಮೂಲಗಳಿಂದ ಧನಸಹಾಯವನ್ನು ಪಡೆಯಲು ವೃತ್ತಿನಿರತ ಧನಸಂಗ್ರಹಕಾರರನ್ನು ನೇಮಿಸಬೇಕು.<br>• ಸರ್ಕಾರದ ಧನಸಹಾಯವನ್ನು, ಒಂದು ಯೋಜನೆಯ ಆಧಾರದ ಮೇಲೆ, ಸಮಷ್ಟಿ ಅನುದಾನ (Block grant)ದಂತೆ ನೀಡಬೇಕು.<br>• ಮರುಸಂದಾಯ ಮಾಡುವ ಶಕ್ತಿಯಿರುವ ವಿದ್ಯಾರ್ಥಿಗಳಿಗೆ |

| | |
|---|---|
| ರೂಪದಲ್ಲಿ ಬರುವ ಕೊಡುಗೆಗಳನ್ನು ಪ್ರೋತ್ಸಾಹಿಸಬೇಕು. ವಿಶ್ವವಿದ್ಯಾಲಯಗಳಲ್ಲಿ ಖಾಸಗಿ ಬಂಡವಾಳ ಹೂಡಿಕೆಗೆ ಅವಕಾಶ ನೀಡಬೇಕು. ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಬೇಕು. ಅಂತರರಾಷ್ಟ್ರೀಯ ವಿದ್ಯಾರ್ಥಿಗಳನ್ನು ಆಕರ್ಷಿಸುವ ಪ್ರಯತ್ನಗಳನ್ನು ಮಾಡಬೇಕು. | ಖಾತರಿಯಾದ ವಿದ್ಯಾರ್ಥಿ-ಸಾಲಗಳನ್ನು ಹಾಗೂ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ಕಾರ್ಯಗತಗೊಳಿಸಬೇಕು. |

Source: MHRD (2009b); NKC (2009); PRS Legislative Research

**ಉನ್ನತ ಶಿಕ್ಷಣಕ್ಕಾಗಿ ಉದ್ದೇಶಿತ ನಿಯಂತ್ರಣಾ ರೂಪುರೇಷೆ**

ಉನ್ನತ ಶಿಕ್ಷಣಕ್ಕಾಗಿ ಇರುವ ನಿಯಂತ್ರಣಾ ರೂಪುರೇಷೆಗಳಲ್ಲಿ ಮಹತ್ವಪೂರ್ಣ ಬದಲಾವಣೆಗಳಿಗೆ ದಾರಿಯಾಗುವಂತಹ ಆರು ಮಸೂದೆಗಳನ್ನು ಸರ್ಕಾರವು ಮಂಡಿಸಿದೆ:

(a) ಉನ್ನತ ಶಿಕ್ಷಣ ಮತ್ತು ಸಂಶೋಧನೆ (Higher Education and Research (HER)) ಮಸೂದೆ, 2011: ಇದು, ಕೃಷಿಶಿಕ್ಷಣವನ್ನು ಹೊರತು ಪಡಿಸಿ, ಎಲ್ಲಾ ಕ್ಷೇತ್ರಗಳಲ್ಲಿನ ಉನ್ನತ ಶಿಕ್ಷಣ ಮತ್ತು ಸಂಶೋಧನೆಗಳಿಗೆ ಮಾನದಂಡಗಳನ್ನು ನಿರ್ಧರಿಸಿ, ಎತ್ತಿಹಿಡಿಯುವುದನ್ನು ಸುಗಮಗೊಳಿಸುವ ಸಲುವಾಗಿ ರಾಷ್ಟ್ರೀಯ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಆಯೋಗ (National Commission of Higher Education and Research (NCHER)) ವನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ. ಈ ಆಯೋಗವು UGC, AICTE ಮತ್ತು NCTE ಗಳಿಗೆ ಬದಲಿಯಾಗಿ ಕಾರ್ಯನಿರ್ವಹಿಸುವುದು.

(b) ಆರೋಗ್ಯಕ್ಕಾಗಿ ಮಾನವ ಸಂಪನ್ಮೂಲ ರಾಷ್ಟ್ರೀಯ ಆಯೋಗ (National Commission for Human Resources for Health (NCHRH)) ಮಸೂದೆ, 2011: ಇದು ದೇಶದಲ್ಲಿ ಆರೋಗ್ಯ ಶಿಕ್ಷಣಕ್ಕಾಗಿ ಮಾನದಂಡಗಳನ್ನು ನಿರ್ಧರಿಸಿ, ನಿಯಂತ್ರಿಸುವಂತಹ ಪ್ರಕ್ರಿಯಾ ಕಾರ್ಯತಂತ್ರವನ್ನು ಸ್ಥಾಪಿಸುವ ಗುರಿ ಹೊಂದಿದೆ. ಅದು ಭಾರತೀಯ ಶುಶ್ರೂಷಾ ಪರಿಷತ್ತು, ಔಷಧ ವಿಜ್ಞಾನ ಮಂಡಳಿ, ದಂತವೈದ್ಯಕೀಯ ಮಂಡಳಿ, ಮತ್ತು ವೈದ್ಯಕೀಯ ಮಂಡಳಿಗಳಿಗೆ ಬದಲಿಯಾಗಿ ಕಾರ್ಯನಿರ್ವಹಿಸುವುದು.

(c) ವಿದೇಶಿ ಶಿಕ್ಷಣ ಸಂಸ್ಥೆ (ಪ್ರವೇಶ ಮತ್ತು ಕಾರ್ಯಾಚರಣೆಗಳ ನಿಯಂತ್ರಣ) ಗಳ ಮಸೂದೆ, 2010: ವಿದೇಶಿ ಸಂಸ್ಥೆಗಳು ಸ್ಥಳೀಯ ಪಾಲುದಾರರಿಲ್ಲದೆ ಭಾರತದಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು, ಕೆಲವು ನಿರ್ದಿಷ್ಟ ಷರತ್ತುಗಳಿಗೊಳಪಟ್ಟು, ಅನುಮತಿ ನೀಡುವ ಉದ್ದೇಶ ಹೊಂದಿದೆ.

(d) ಉನ್ನತ ಶಿಕ್ಷಣ ಸಂಸ್ಥೆಗಳಿಗಾಗಿ ರಾಷ್ಟ್ರೀಯ ಮಾನ್ಯತಾ ನಿಯಂತ್ರಣ ಪ್ರಾಧಿಕಾರ (National Accreditation Regulatory Authority (NARA)) ಮಸೂದೆ, 2010: ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡುವಂತಹ ಸಾಂಘಿಕ ವ್ಯವಸ್ಥೆಯೊಂದನ್ನು ನಿಯೋಜಿಸುವ ಗುರಿ ಹೊಂದಿದೆ.


(e) ಶೈಕ್ಷಣಿಕ ನ್ಯಾಯಮಂಡಳಿಗಳ ಮಸೂದೆ, 2010: ಸರ್ಕಾರವು, ಈ ಮಸೂದೆಯ ಮೂಲಕ, ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ನ್ಯಾಯಮಂಡಳಿಗಳನ್ನು ಸ್ಥಾಪಿಸಲು ಬಯಸುತ್ತದೆ. ಸಂಸ್ಥೆಗಳು, ವಿದ್ಯಾರ್ಥಿಗಳು, ಅಧ್ಯಾಪಕ ವರ್ಗ ಮತ್ತು ಶಾಸನೋಕ್ತ ಪ್ರಾಧಿಕಾರಗಳಿಗೆ ಸಂಬಂಧಪಟ್ಟಂತಹ ವಿವಾದಗಳಿಗೆ ಈ ನ್ಯಾಯಮಂಡಳಿಗಳು ಕಾನೂನುರೀತ್ಯಾ ತೀರ್ಪು ನೀಡುವುದು.

(f) ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿನ ನ್ಯಾಯಯುತವಲ್ಲದ ಕಾರ್ಯರೀತಿಗಳ ನಿಷೇಧ ಮಸೂದೆ, 2010: ಕ್ಯಾಪಿಟೇಷನ್ ಶುಲ್ಕ ವಿಧಿಸುವುದು, ಮಾಡಿದ ಪಾವತಿಗಳಿಗೆ ರಶೀದಿ ನೀಡದಿರುವುದು ಮತ್ತು ಸುಳ್ಳು ಜಾಹೀರಾತುಗಳನ್ನು ಪ್ರಕಟಿಸುವುದು- ಇವುಗಳನ್ನೂ ಒಳಗೊಂಡಂತೆ, ಖಾಸಗಿ ಶಿಕ್ಷಣ ಸಂಸ್ಥೆಗಳ ನ್ಯಾಯಯುತವಲ್ಲದ ಕಾರ್ಯರೀತಿಗಳನ್ನು ದಂಡನೆಗೊಳಪಡಿಸುವ ಉದ್ದೇಶ ಹೊಂದಿದೆ.

ಈ ಆರು ಮಸೂದೆಗಳ ಮೂಲಕ ಮಂಡಿಸಲಾದ ನಿಯಂತ್ರಣಾ ರೂಪುರೇಷೆಗಳು ಪ್ರಸ್ತಾಪಿಸುವುದೇನೆಂದರೆ: NCHER ಮತ್ತು NCHRH ಇವೆರಡು ಉನ್ನತ ಶಿಕ್ಷಣ ಸಂಸ್ಥೆಗಳಿಗೆ, ವಿದೇಶಿ ಶಿಕ್ಷಣ ಸಂಸ್ಥೆಗಳನ್ನೂ ಒಳಗೊಂಡಂತೆ, ಮಾನದಂಡಗಳನ್ನು ರೂಪಿಸುವ ಹಾಗೂ ನಿಯಂತ್ರಿಸುವ ಶಾಸನೋಕ್ತ ಪ್ರಾಧಿಕಾರಗಳಾಗಿರುತ್ತವೆ. NARA ಸಂಸ್ಥೆಗಳಿಗೆ ಮಾನ್ಯತೆಯನ್ನು ನೀಡಲು ವಿವಿಧ ನಿಯೋಗ ಸಂಸ್ಥೆಗಳಿಗೆ ಅನುಮತಿ ನೀಡುತ್ತದೆ. ಸಂಸ್ಥೆಗಳು, ವಿದ್ಯಾರ್ಥಿಗಳು ಮತ್ತು ಅಧ್ಯಾಪಕ ವರ್ಗಗಳ ನಡುವಿನ ವಿವಾದಗಳನ್ನು ಶೈಕ್ಷಣಿಕ ನ್ಯಾಯಮಂಡಳಿಗಳ ಮೂಲಕ ಬಗೆಹರಿಸಲಾಗುವುದು. ಕ್ಯಾಪಿಟೇಷನ್ ಶುಲ್ಕ, ವಂತಿಗೆಗಳು ಮತ್ತು ಸುಳ್ಳು ಜಾಹೀರಾತುಗಳಂತಹ ನ್ಯಾಯಯುತವಲ್ಲದ ಕಾರ್ಯರೀತಿಗಳಿಗೆ ದಂಡನೆ ವಿಧಿಸಲಾಗುವುದು.

ಆದಾಗ್ಯೂ, ಈ ಮಸೂದೆಗಳಲ್ಲಿ ಪ್ರತಿಯೊಂದೂ ತನ್ನ ಉದ್ದೇಶಗಳನ್ನು ಅತ್ಯವಶ್ಯವಾಗಿ ಸಾಧಿಸುತ್ತದೆಯೇ ಎಂಬುದು ಸ್ಪಷ್ಟವಿಲ್ಲ. (UGC ಮತ್ತು AICTE ಗಳಿಗೆ ಬದಲಿಯಾಗಿ) NCHER ಸ್ಥಾಪನೆಯನ್ನು ಪ್ರಸ್ತಾಪಿಸುವ HER ಮಸೂದೆಯು ಉನ್ನತ ಶಿಕ್ಷಣದಲ್ಲಿ ಮಾನದಂಡಗಳನ್ನು ಪಾಲಿಸುವುದರ ಜೊತೆಗೆ ಸ್ವಾಯತ್ತತೆಯನ್ನು ಪ್ರೋತ್ಸಾಹಿಸುವ ಉದ್ದೇಶವಿರುವುದಾಗಿ ತಿಳಿಸುತ್ತದೆ. ಪದವಿ ಅಥವಾ ಡಿಪ್ಲೋಮಾ ಪ್ರದಾನ ಮಾಡಲು ಅಗತ್ಯವಿರುವ ಅಂಶಗಳನ್ನು ಸ್ಪಷ್ಟಪಡಿಸುವ ಅಧಿಕಾರವನ್ನು NCHER ಹೊಂದಿದೆ; ಜೊತೆಗೆ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಮುಚ್ಚುವ, ಮಾನ್ಯತೆಯ ಸಲುವಾಗಿ (ಭೌತಿಕ ಮೂಲಸೌಕರ್ಯ, ಅಧ್ಯಾಪಕ ವರ್ಗದ ವಿದ್ಯಾರ್ಹತೆಯೂ ಸೇರಿದಂತೆ) ಶೈಕ್ಷಣಿಕ ಗುಣಮಟ್ಟ ಹಾಗೂ ಅನುದಾನ ಹಂಚುವಿಕೆಗೆ ಸಂಬಂಧಿಸಿದಂತೆ ನಿಬಂಧನೆಗಳನ್ನು ವಿಧಿಸುವ ಅಧಿಕಾರವನ್ನೂ ಸಹ ಹೊಂದಿದೆ. ಉಪಕುಲಪತಿಗಳನ್ನಾಗಿ ನೇಮಿಸುವ ಸಲುವಾಗಿ, ನಾಯಕತ್ವದ ಹುದ್ದೆಗಳಿಗಾಗಿ ವಿದ್ವಾಂಸರ ವಿವರಗಳ ಪಟ್ಟಿಯನ್ನು ಕೂಡ ಅದು ಇಟ್ಟುಕೊಳ್ಳಲಾಗುವುದು. ಈ ಅಧಿಕಾರಗಳು UGC ಮತ್ತು AICTE ಹೊಂದಿರುವ ಅಧಿಕಾರಗಳಿಗೆ ಸಮಾನ ರೂಪದವು.

**ಚಿತ್ರ 1.1 ಉದ್ದೇಶಿತ ನಿಯಂತ್ರಣಾ ರೂಪುರೇಷೆ**




Source: Prepared by the authors

ರಾಷ್ಟ್ರೀಯ ಮಾನ್ಯತಾ ನಿಯಂತ್ರಣ ಪ್ರಾಧಿಕಾರ ಮಸೂದೆ, 2010 ಪ್ರತಿ ಶೈಕ್ಷಣಿಕ ಸಂಸ್ಥೆ ಮತ್ತು ಕಾರ್ಯಕ್ರಮದ ಅಧಿಕೃತ ಮಾನ್ಯತೆ ಹೊಂದಿರುವುದನ್ನು ಕಡ್ಡಾಯಗೊಳಿಸುತ್ತದೆ. ಆದಾಗ್ಯೂ, ಈ ಮಸೂದೆಯು ಸರ್ಕಾರಿ-ನಿಯಂತ್ರಿತ ಲಾಭರಹಿತ-ನಿಯೋಗ ಸಂಸ್ಥೆಗಳನ್ನು ಮಾತ್ರ ಅಧಿಕೃತ ಮಾನ್ಯತಾ ಸಂಸ್ಥೆಗಳಾಗಿ ನೋಂದಾಯಿಸಿಕೊಳ್ಳಲು ಅವಕಾಶ ನೀಡುತ್ತದೆ. ಇದು ಬಹಳಷ್ಟು ಅಂಶಗಳ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ:

(a) ಶೈಕ್ಷಣಿಕ ಸಂಸ್ಥೆಗಳ ಗುಣಮಟ್ಟ ಯೋಗ್ಯತೆಯನ್ನು ನಿರ್ಣಯಿಸಲು ಆರೋಗ್ಯಕರವಾದ ತುಲನಾತ್ಮಕ ಗರಿಷ್ಠ ಸಾಧನೆಯ ವಾತಾವರಣ ಸೃಷ್ಟಿಸುವ ಉದ್ದೇಶವನ್ನು ಇದು ದುರ್ಬಲಗೊಳಿಸಬಹುದೇ;

(b) ಮೂರು ವರ್ಷಗಳೊಳಗಾಗಿ (ವೈದ್ಯಕೀಯ ಸಂಸ್ಥೆಗಳಿಗೆ ಐದು ವರ್ಷಗಳು) ಎಲ್ಲ ಶೈಕ್ಷಣಿಕ ಸಂಸ್ಥೆಗಳೂ ಅಧಿಕೃತ ಮಾನ್ಯತೆ ಪಡೆಯಲೇಬೇಕೆಂಬ ಸೂಚನೆಯಿಂದಾಗಿ, ಮಾನ್ಯತೆ ಪಡೆಯಲು ನೀಡಿರುವ ಕಾಲಾವಧಿಯು ಸಾಕಾಗುವುದೇ;

(c) ಖಾಸಗಿ ಕ್ಷೇತ್ರದ ಭಾಗವಹಿಸುವಿಕೆಯ ಮೇಲಿರುವ ನಿರ್ಬಂಧದ ಕಾರಣದಿಂದಾಗಿ ನಿಯಂತ್ರಣಾ ಘಟಕದ (NARA) ಅವಶ್ಯಕತೆ ಇದೆಯೇ. ಅಮೆರಿಕ ಸಂಯುಕ್ತ ಸಂಸ್ಥಾನ, ಬ್ರಿಟನ್ ಮತ್ತು ಜರ್ಮನಿಯಂತಹ ದೇಶಗಳಲ್ಲಿ ಸಾರ್ವಜನಿಕ ಹಾಗೂ ಖಾಸಗಿ ನಿಯೋಗ ಸಂಸ್ಥೆಗಳೆರಡಕ್ಕೂ ಸಹ ಶೈಕ್ಷಣಿಕ ಸಂಸ್ಥೆಗಳಿಗೆ ಮಾನ್ಯತೆ ನೀಡಲು ಅವಕಾಶ ಕೊಡಲಾಗಿದೆ. NKC ಯಂತಹ ಸಮಿತಿಯು ಸಾರ್ವಜನಿಕ ಮತ್ತು ಖಾಸಗಿ ಮಾನ್ಯತಾ ಸಂಸ್ಥೆಗಳೆರಡಕ್ಕೂ ಅವಕಾಶ ನೀಡಬೇಕೆಂದು ಸಲಹೆ ನೀಡಿತು; ಮಾನ್ಯತಾ ಸಂಸ್ಥೆಗಳು ಸರ್ಕಾರದ ಹಿಡಿತಕ್ಕೊಳಪಡದೆ ಸ್ವತಂತ್ರವಾಗಿರಬೇಕೆಂದು ಯಶ್ ಪಾಲ್ ಸಮಿತಿಯು ಸೂಚಿಸಿತು (MHRD 2009b; NKC 2009).

ವಿದೇಶಿ ಶಿಕ್ಷಣ ಸಂಸ್ಥೆಗಳ ಮಸೂದೆ, 2010 ಭಾರತದಲ್ಲಿ ಸ್ವತಂತ್ರ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ವಿದೇಶಿ ವಿಶ್ವವಿದ್ಯಾಲಯಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶ ಹೊಂದಿದೆ. ಆದಾಗ್ಯೂ, ವಿದೇಶಿ ಸಂಸ್ಥೆಗಳು ಕನಿಷ್ಠ ಪಕ್ಷ ರೂ.500 ದಶಲಕ್ಷಗಳ ಮೂಲಧನವನ್ನು ಕಾಪಿಟ್ಟುಕೊಳ್ಳಬೇಕೆಂದು, ಈ ಬಂಡವಾಳವನ್ನು ಸ್ವದೇಶಕ್ಕೆ ಮರಳಿ ಕಳಿಸಲು ಅವಕಾಶ ನೀಡುವುದಿಲ್ಲವೆಂದು ಮಸೂದೆಯು ಆದೇಶಿಸುತ್ತದೆ; ಹಾಗೂ ಅವುಗಳು ತಮ್ಮ ತಾಯ್ನಾಡಿನಲ್ಲಿ 20 ವರ್ಷಗಳ ಕಾರ್ಯಾಚರಣೆಯ ಇತಿಹಾಸ ಹೊಂದಿರಬೇಕೆಂದೂ ಬೇಡುತ್ತದೆ. ಇಂತಹ ಷರತ್ತುಗಳು ಇರುವುದರಿಂದ, ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯಗಳು ಭಾರತಕ್ಕೆ ಬರುವ ಆಯ್ಕೆಯನ್ನು ಪರಿಗಣಿಸುತ್ತವೆಯೇ ಎಂಬುದು ಅನುಮಾನಾಸ್ಪದ ವಿಷಯ. ವಿದೇಶಿ ಶೈಕ್ಷಣಿಕ ಸಂಸ್ಥೆಗಳಿಗೆ ದೇಶದಲ್ಲಿ ಕಾರ್ಯಚರಣೆ ಮಾಡಲು ಅವಕಾಶ ನೀಡಬಹುದೇ ಎಂಬುದರ ಬಗ್ಗೆ ತಜ್ಞರಲ್ಲಿ ಭಿನ್ನಾಭಿಪ್ರಾಯಗಳಿವೆ. ಅದು ಈ ಕ್ಷೇತ್ರವನ್ನು ವ್ಯಾಣಿಜ್ಯೀಕರಣಗೊಳಿಸುತ್ತದೆ ಹಾಗೂ ಅವಕಾಶ ಲಭ್ಯತೆಯಲ್ಲಿ ತಾರತಮ್ಯವನ್ನು ಹೆಚ್ಚಿಸುತ್ತದೆ ಎಂದು ಅದನ್ನು ವಿರೋಧಿಸುವವರು ವಾದಿಸುತ್ತಾರೆ (Chattopadhyay (ಚಟ್ಟೋಪಾಧ್ಯಾಯ) 2009; Chowdhury (ಚೌಧರಿ) 2010; Rahman (ರೆಹೆಮಾನ್) 2010). ಅದು ವಿದ್ಯಾರ್ಥಿಗಳಿಗಿರುವ ಆಯ್ಕೆಗಳನ್ನು ಹೆಚ್ಚಿಸುತ್ತದೆ, ಭಾರತದ ಶೈಕ್ಷಣಿಕ ಸಂಸ್ಥೆಗಳಲ್ಲಿ ಗುಣಾತ್ಮಕ ಸುಧಾರಣೆಯ ಸಾಧ್ಯತೆಯೊಂದಿಗೆ ಈ ಕ್ಷೇತ್ರದಲ್ಲಿ ಸ್ಪರ್ಧೆಯನ್ನು ಹೆಚ್ಚಿಸುತ್ತದೆ, ಔದ್ಯೋಗಿಕ ಮಾರುಕಟ್ಟೆಗೆ ತಾಂತ್ರಿಕ ಕೌಶಲಗಳ ಅಗತ್ಯತೆಯನ್ನು ಪೂರೈಸುತ್ತದೆ, ವಿದೇಶಗಳಿಗೆ ಹರಿದುಹೋಗುವ ಆರ್ಥಿಕ ಸಂಪನ್ಮೂಲದ ಸ್ವಲ್ಪ ಭಾಗವನ್ನು ಉಳಿಸಿಕೊಳ್ಳುತ್ತದೆ ಎಂದು ಸಮರ್ಥಕರು ವಾದ ಮಂಡಿಸುತ್ತಾರೆ (*Indian Express* (ಇಂಡಿಯನ್ ಎಕ್ಸ್ಪ್ರೆಸ್) 2010; NKC (ಎನ್‌ಕೆಸಿ) 2009; Palit (ಪಾಲಿತ್) 2009; Schukoske (ಶುಕೌಸ್ಕಿ) 2006). ಮಸೂದೆಯನ್ನು ಪರಿಶೀಲಿಸಿದ ಮಾನವ ಸಂಪನ್ಮೂಲ ಅಭಿವೃದ್ಧಿಯ ಸ್ಥಾಯಿ ಸಮಿತಿಯು, ಭಾಗೀದಾರರಿಗೆ (Stakeholders) ಸಮರ್ಪಕ ಸುರಕ್ಷತೆಗಳನ್ನು ಒದಗಿಸಿ, ಮಸೂದೆಯನ್ನು ಅಂಗೀಕರಿಸಬಹುದೆಂದು ಸಲಹೆ ನೀಡಿತು. ಸಮಿತಿಯು ನೀಡಿದ ಸಲಹೆಗಳು: (a) ಸ್ವತಂತ್ರ ನಿಯಂತ್ರಕರೊಬ್ಬರು ಶುಲ್ಕ, ಪಠ್ಯಕ್ರಮ ಮತ್ತು ಸಂಬಳ ಇತ್ಯಾದಿಗಳ ಪರಿವೀಕ್ಷಣೆ ಮಾಡಬೇಕು; (b) ಆರಂಭದಲ್ಲಿ ಅಲ್ಪಾವಧಿ ಆಧಾರದ ಮೇಲೆ ಅನುಮೋದನೆ ನೀಡಿ, ಅನಂತರ ಸಾಧನೆಯನ್ನು ಆಧರಿಸಿ ವಿಸ್ತರಣೆ ನೀಡಬಹುದು; (c) ವಿದೇಶಿ ಸಂಸ್ಥೆಗಳು ತಮ್ಮ ಹೆಚ್ಚುವರಿ ಆರ್ಥಿಕ ಸಂಪನ್ಮೂಲಗಳನ್ನು ಭಾರತದಲ್ಲಿ ಬಳಸುವುದಕ್ಕಾಗಿ ಸರ್ಕಾರವು ಪ್ರೋತ್ಸಾಹಕಗಳನ್ನು ರೂಪಿಸಬೇಕು (GoI 2011).

ನ್ಯಾಯಯುತವಲ್ಲದ ಕಾರ್ಯರೀತಿಗಳ ನಿಷೇಧ ಮಸೂದೆ, 2010 ಕ್ಯಾಪಿಟೇಷನ್ ಶುಲ್ಕ ತೆಗೆದುಕೊಳ್ಳುವುದನ್ನು ಅಪರಾಧವೆಂದು ಪರಿಗಣಿಸುತ್ತದೆ. ಸಂಸ್ಥೆಗಳು ತಮ್ಮ ಪರಿಚಯ-ಪ್ರಕಟನೆಗಳಲ್ಲಿ (prospectus) ಕೆಲವು ನಿರ್ದಿಷ್ಟ ಮಾಹಿತಿಯನ್ನು ಬಹಿರಂಗ ಪಡಿಸುವುದನ್ನು ಕೂಡ ಮಸೂದೆಯು ಕಡ್ಡಾಯಗೊಳಿಸುತ್ತದೆ. ಆದಾಗ್ಯೂ, ಕೆಲವು ತಜ್ಞರು ಈಗಲೂ ಸಹ ಕ್ಯಾಪಿಟೇಷನ್ ಶುಲ್ಕ ನಿಷೇಧಿಸಲ್ಪಟ್ಟಿದೆಯೆಂದು ಅಭಿಪ್ರಾಯ ಪಡುತ್ತಾರೆ (MHRD 2009b). ಈ ರೀತಿಯ ನಿಯಂತ್ರಣಗಳನ್ನು ಅನುಷ್ಠಾನಗೊಳಿಸುವಂತಹ ವಿಶೇಷ ವ್ಯವಸ್ಥೆಯೊಂದನ್ನು ಮಸೂದೆಯು ಒಳಗೊಳ್ಳದೆ ಇರುವುದರಿಂದ, ಅಂತಹ ಕಾನೂನು ನ್ಯಾಯಯುತವಲ್ಲದ ಕಾರ್ಯರೀತಿಗಳಲ್ಲಿ ಬದಲಾವಣೆ ತರುವ ಸಾಧ್ಯತೆ ಗಮನಾರ್ಹವಾಗಿ ಹೆಚ್ಚೇನೂ ಇರಲಾರದು. ಅಷ್ಟೇ ಅಲ್ಲದೆ, ಮೂಲ ಸಮಸ್ಯೆಗಳಾದ ಸೀಟುಗಳ ಕೊರತೆ ಮತ್ತು ಸಂಸ್ಥೆಗಳ ಗುಣಮಟ್ಟ- ಇವುಗಳ ಪರಿಹಾರಕ್ಕೆ ಗಮನ ನೀಡಿದರೆ ಕ್ಯಾಪಿಟೇಷನ್ ಶುಲ್ಕ ಸಮಸ್ಯೆಯು ತಾನಾಗಿಯೇ ಕಡಮೆಯಾಗುತ್ತದೆ (Basu 2009; Debroy 2008; Mehta 2005). ಮಾನವ ಸಂಪನ್ಮೂಲ ಅಭಿವೃದ್ಧಿಯ ಸ್ಥಾಯಿ ಸಮಿತಿಯು ಈ ಮಸೂದೆಯನ್ನು ಪರಾಮರ್ಶಿಸಿ ನೀಡಿದ ಸಲಹೆಯೇನೆಂದರೆ: ಬೋಧನಾ ಶುಲ್ಕವನ್ನು ಮೀರಿದ, ಅದರ

ಶೇಕಡ 10 ಕ್ಕಿಂತ ಹೆಚ್ಚಿನ, ಮೊತ್ತವನ್ನು ಕ್ಯಾಪಿಟೇಷನ್ ಶುಲ್ಕವೆಂದು ಕರೆಯಬೇಕು ಹಾಗೂ ಅಂತಹವನ್ನು ಸ್ವೀಕರಿಸಿದ್ದಕ್ಕಾಗಿ ತೆರಬೇಕಾದ ದಂಡವನ್ನು ಹೆಚ್ಚಿಸಬೇಕು (GoI, 2011).

## ಔದ್ಯೋಗಿಕ ಶಿಕ್ಷಣ

ಭಾರತದಲ್ಲಿ ಔದ್ಯೋಗಿಕ ಶಿಕ್ಷಣವನ್ನು (ಒಂದು ನಿರ್ದಿಷ್ಟ ವೃತ್ತಿ ಅಥವಾ ಕಸಬಿನಲ್ಲಿ ತರಬೇತಿ) ಎರಡು ಮೂಲ ವಿಧಾನಗಳಲ್ಲಿ ನೀಡಲಾಗುತ್ತದೆ: ಔಪಚಾರಿಕ ಮತ್ತು ಅನೌಪಚಾರಿಕ. ಔಪಚಾರಿಕ ಮಾದರಿಯು ಈ ಮುಂದಿನವುಗಳನ್ನು ಒಳಗೊಂಡಿದೆ: (a) ವೃತ್ತಿಪರ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್ ಗಳಲ್ಲಿ ನೀಡಲಾಗುವ ಔದ್ಯೋಗಿಕ ಕೋರ್ಸುಗಳು (b) ಪ್ರೌಢ ಹಂತದ ಶಾಲೆಗಳಲ್ಲಿನ ಔದ್ಯೋಗಿಕ ಶಾಖೆಗಳು (c) ಕೈಗಾರಿಕಾ ತರಬೇತಿ ಸಂಸ್ಥೆ (Industrial Training Institutes (ITIs)) / ಕೈಗಾರಿಕಾ ತರಬೇತಿ ಕೇಂದ್ರ (Industrial Training Centres (ITCs)) ಗಳಂತಹ ಪರಿಣಿತ ಸಂಸ್ಥೆಗಳಲ್ಲಿ ತಾಂತ್ರಿಕ ತರಬೇತಿ ಮತ್ತು (d) ಅನುಭವಿಗಳ ಬಳಿ ಶಿಷ್ಯವೃತ್ತಿ ತರಬೇತಿ (apprenticeship training). ಅನೌಪಚಾರಿಕ ಮಾದರಿಯು ಕೆಲಸದ ಸ್ಥಳದಲ್ಲಿ ತರಬೇತಿ ಮತ್ತು ಕುಟುಂಬದ ಸದಸ್ಯರ ಬಳಿ ಶಿಷ್ಯವೃತ್ತಿ (ಇಂತಹ ಕೆಲಸಗಾರರಿಗೆ ಪ್ರಮಾಣೀಕರಣವನ್ನು ನೀಡಲಾಗುವುದಿಲ್ಲ) ಇವುಗಳನ್ನು ಒಳಗೊಂಡಿದೆ. ಔದ್ಯೋಗಿಕ ತರಬೇತಿಯನ್ನು ಒದಗಿಸುವ ಸರ್ಕಾರದ 17 ಸಚಿವಾಲಯಗಳಿವೆ (ಮಾನವ ಸಂಪನ್ಮೂಲ ಅಭಿವೃದ್ಧಿ, ಕಾರ್ಮಿಕ, ಪ್ರವಾಸೋದ್ಯಮ, ಜವಳಿ, ನಗರಾಭಿವೃದ್ಧಿ, ಕೃಷಿ ಮತ್ತು ಆಹಾರ ಸಂಸ್ಕರಣೋದ್ಯಮ ಸಚಿವಾಲಯಗಳಂತಹವು) (PIB 2012a). ಪ್ರತಿ ಸಚಿವಾಲಯವೂ ಕೈಮಗ್ಗ, ಕರಕುಶಲತೆ, ಸಣ್ಣ ಕೈಗಾರಿಕೆ, ಮತ್ತು ಪ್ರವಾಸೋದ್ಯಮಗಳಂತಹ ತನ್ನ ವಿಶೇಷ ಪರಿಣಿತಿಯ ವಿಷಯಕ್ಕೆ ಸಂಬಂಧಿಸಿದ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುತ್ತದೆ (Planning Commission 2008b).

ಪ್ರಸ್ತುತ, 15-29 ವಯೋಮಾನದಲ್ಲಿರುವ ಕಾರ್ಮಿಕ ಪಡೆಯಲ್ಲಿ ಕೇವಲ ಶೇಕಡ 2ರಷ್ಟು ಮಾತ್ರ ಔಪಚಾರಿಕ ಔದ್ಯೋಗಿಕ ತರಬೇತಿ ಪಡೆದಿದ್ದಾರೆ; ಹಾಗೂ ಶೇಕಡ 8ರಷ್ಟು ಅನೌಪಚಾರಿಕ ಔದ್ಯೋಗಿಕ ತರಬೇತಿ ಪಡೆದಿದ್ದಾರೆ. [ಗಮನಿಸಿ: ಭಾರತದ ಸುಮಾರು ಶೇಕಡ 93ರಷ್ಟು ಕಾರ್ಮಿಕ ಪಡೆಯು ಅನೌಪಚಾರಿಕ ಕ್ಷೇತ್ರದಲ್ಲಿದೆ (Department of School Education and Literacy (ಡಿಪಾರ್ಟ್ಮೆಂಟ್ ಆಫ್ ಸ್ಕೂಲ್ ಎಡ್ಯುಕೇಶನ್ ಆಂಡ್ ಲಿಟ್ರೆಸಿ) 2011)]. ದಕ್ಷಿಣ ಕೊರಿಯಾ (ಶೇ.96), ಜರ್ಮನಿ (ಶೇ.75), ಜಪಾನ್ (ಶೇ.80), ಮತ್ತು ಬ್ರಿಟನ್ (ಶೇ.68) ನಂತಹ ದೇಶಗಳಲ್ಲಿ ಅತ್ಯಧಿಕ ಪ್ರಮಾಣದ 19-24 ವಯೋಮಾನದ ಕಾರ್ಮಿಕ ಪಡೆಯು ಔದ್ಯೋಗಿಕ ತರಬೇತಿ ಪಡೆದುಕೊಂಡಿದ್ದಾರೆ (Planning Commission 2008b). ಭಾರತವು 2022ರ ವೇಳೆಗೆ 500 ದಶಲಕ್ಷದಷ್ಟು ಕುಶಲ ಕಾರ್ಮಿಕರನ್ನು ಸಿದ್ಧಗೊಳಿಸುವ ಗುರಿಯನ್ನಿಟ್ಟುಕೊಂಡಿದೆ (PIB (Press Information Bureau) 2012a). ಆದ್ದರಿಂದ, ಕೌಶಲ ಅಭಿವೃದ್ಧಿ ಕಾರ್ಯಕ್ರಮಗಳ ಸಾಮರ್ಥ್ಯ ಮತ್ತು ಸಾಧ್ಯತೆಗಳನ್ನು ವೃದ್ಧಿಸಿಕೊಳ್ಳುವ ತುರ್ತಾದ ಅಗತ್ಯವಿದೆ.

**ಔದ್ಯೋಗಿಕ ಶಿಕ್ಷಣದ ನಿಯಂತ್ರಣ**

ಪ್ರೌಢಶಾಲಾ ಶಿಕ್ಷಣದ ಔದ್ಯೋಗೀಕರಣ (vocationalisation) ಪ್ರಕ್ರಿಯೆಯಾಗಿ ಗುರುತಿಸಲ್ಪಡುವ ಕೇಂದ್ರ ಪ್ರಾಯೋಜಿತ ಯೋಜನೆಯೊಂದರ ಅಡಿಯಲ್ಲಿ, ಸರ್ಕಾರಿ ಶಾಲೆಗಳು ಮತ್ತು ಸರ್ಕಾರದ ಅನುದಾನ ಪಡೆಯುವ ಶಾಲೆಗಳು ಔದ್ಯೋಗಿಕ ಕೋರ್ಸುಗಳನ್ನು ಲಭ್ಯವಾಗಿಸುತ್ತವೆ. 1988ರಲ್ಲಿ ಪ್ರಾರಂಭಿಸಲ್ಪಟ್ಟ ಈ ಯೋಜನೆಯು ಆಡಳಿತದ ವ್ಯವಸ್ಥೆಗಳನ್ನು ರೂಪಿಸಲು, ಪಠ್ಯಕ್ರಮವನ್ನು ಸಿದ್ಧಪಡಿಸಲು ಹಾಗೂ ಶಿಕ್ಷಕರಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ರಾಜ್ಯಗಳಿಗೆ ಆರ್ಥಿಕ ಸಹಾಯ ನೀಡುತ್ತದೆ. ಅಲ್ಪಾವಧಿಯ ಕೋರ್ಸುಗಳನ್ನು ನಡೆಸಲು ಅದು ಸರ್ಕಾರೇತರ ಸಂಸ್ಥೆಗಳಿಗೂ ಕೂಡ ಆರ್ಥಿಕ ಸಹಾಯವನ್ನು ಒದಗಿಸುತ್ತದೆ. ಅದಕ್ಕಾಗಿ ರಾಜ್ಯ ಸರ್ಕಾರಗಳು ಶಾಲೆಗಳನ್ನು ಆಯ್ಕೆ ಮಾಡುತ್ತವೆ.[21] 1988ರಿಂದ ಈಚೆಗೆ ಸುಮಾರು 9000 ಪ್ರೌಢಶಾಲೆಗಳು ಈ ಕಾರ್ಯಕ್ರಮವನ್ನು ಆರಂಭಿಸಿವೆ. ಶಾಲೆಗಳು ಕೊಡಮಾಡಬಹುದಾದ ಸುಮಾರು 150 ಔದ್ಯೋಗಿಕ ಕೋರ್ಸುಗಳು ಲಭ್ಯವಿವೆ; ಕೋರ್ಸು ಪೂರ್ಣವಾದ ನಂತರ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರವನ್ನು ಪ್ರದಾನ ಮಾಡಲಾಗುತ್ತದೆ.[22] ಅದರ ಜೊತೆಗೆ, CBSE ಶಾಲೆಗಳು (ರಾಷ್ಟ್ರೀಯ ಮುಕ್ತ ಶಾಲೆಯನ್ನೂ ಸೇರಿದಂತೆ) ಕೂಡ ಔದ್ಯೋಗಿಕ ಕೋರ್ಸುಗಳನ್ನು ಒದಗಿಸುತ್ತವೆ (Department of School Education and Literacy n.d.).[23]

ಹಲವು ಬಗೆಯ ಶೈಕ್ಷಣಿಕ ಸಂಸ್ಥೆಗಳು (ಕಾಲೇಜುಗಳು, ಪಾಲಿಟೆಕ್ನಿಕ್ ಗಳು, IIT/ ITCಗಳು) ಔದ್ಯೋಗಿಕ ಕೋರ್ಸುಗಳನ್ನು ಮತ್ತು ತರಬೇತಿಯನ್ನು ಒದಗಿಸುತ್ತವೆ. ಪಾಲಿಟೆಕ್ನಿಕ್ ಗಳು ಎಂಜಿನಿಯರಿಂಗ್, ಔಷಧ ಶಾಸ್ತ್ರ ಮತ್ತು ಹೋಟೆಲ್ ವ್ಯವಸ್ಥಾಪನೆಗಳಿಗೆ ಸಂಬಂಧಿಸಿದ ಜ್ಞಾನಶಾಖೆಗಳಲ್ಲಿ ಮೂರು ವರ್ಷಗಳ ಡಿಪ್ಲೋಮ ಕೋರ್ಸುಗಳನ್ನು ಒದಗಿಸುತ್ತವೆ; ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಪರಿಧಿಯಲ್ಲಿ AICTE ಇವುಗಳ ನಿಯಂತ್ರಣ ಮಾಡುತ್ತದೆ. IITಗಳು/ITCಗಳು 114 ಉದ್ಯಮಗಳಲ್ಲಿ ಔದ್ಯೋಗಿಕ ತರಬೇತಿ ಕೋರ್ಸುಗಳನ್ನು ಆಯೋಜಿಸುತ್ತವೆ ಹಾಗೂ ಇವುಗಳನ್ನು ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಉದ್ಯೋಗ ಮತ್ತು ತರಬೇತಿಗಳ ಸರ್ವೋಚ್ಚ ನಿರ್ದೇಶನಾಲಯವು (Directorate General of Employment and Training) ನಿಯಂತ್ರಣ ಮಾಡುತ್ತದೆ. ತರಬೇತಿ ಕೋರ್ಸುಗಳ ಕಾಲಾವಧಿಯು 6 ತಿಂಗಳಿಂದ 3 ವರ್ಷಗಳವರೆಗೆ ಇರುತ್ತದೆ ಹಾಗೂ VII ರಿಂದ XII ನೇ ತರಗತಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಈ ಕೋರ್ಸುಗಳಿಗೆ ಪ್ರವೇಶ ಕೋರಬಹುದು. ಈ ಸಂಸ್ಥೆಗಳನ್ನು ಖಾಸಗಿ ಕ್ಷೇತ್ರದವರು ಪ್ರಾರಂಭ ಮಾಡಬಹುದು, ಆದರೆ ಆ ಸಚಿವಾಲಯದಿಂದ ನಿಗದಿ ಮಾಡಲ್ಪಟ್ಟ ರೂಢಿಬದ್ಧ ನಿಯಮಗಳನ್ನು ಅವರು ಅನುಸರಿಸಿರಬೇಕು (ibid.).[24] ಪ್ರಸ್ತುತ, ದೇಶದಲ್ಲಿ 3,716 ಪಾಲಿಟೆಕ್ನಿಕ್ ಗಳು ಮತ್ತು 9,480 IITಗಳು/ITCಗಳು ಕಾರ್ಯನಿರ್ವಹಿಸುತ್ತಿವೆ (2,247 ಸರ್ಕಾರದಿಂದ ಹಾಗೂ 7,233 ಖಾಸಗಿಯವರಿಂದ ನಿರ್ವಹಿಸಲ್ಪಡುತ್ತಿವೆ).[25] ಶಿಷ್ಯವೃತ್ತಿ ತರಬೇತಿ ಕಾಯಿದೆ, 1961 (The Apprentice Act, 1961) 94 ಔದ್ಯೋಗಿಕ ಕೋರ್ಸುಗಳಲ್ಲಿ ಶಿಷ್ಯವೃತ್ತಿಯವರ ತರಬೇತಿಯನ್ನು ನಿಯಂತ್ರಣ ಮಾಡುತ್ತದೆ (ಶಾಲೆಗಳಲ್ಲಿ ಔದ್ಯೋಗಿಕ ಕೋರ್ಸುಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳನ್ನೂ ಶಿಷ್ಯವೃತ್ತಿಯಲ್ಲಿರುವವರೆಂದು ಪರಿಗಣಿಸಲಾಗುತ್ತದೆ).

## ಸರ್ಕಾರದ ಅತಿಮುಖ್ಯ ಯೋಜನೆಗಳು

*ರಾಷ್ಟ್ರೀಯ ಔದ್ಯೋಗಿಕ ಶಿಕ್ಷಣ ವಿದ್ಯಾರ್ಹತೆಯ ರಚನಾ-ಚೌಕಟ್ಟು*
*National Vocational Educational Qualification Framework (NVEQF)*

ಸರ್ಕಾರವು NVEQF ಅನ್ನು ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ. NVEQF ರಾಷ್ಟ್ರಮಟ್ಟದ ಸ್ವೀಕಾರಾರ್ಹ ಅರ್ಹತಾಪದ್ಧತಿಯ ಸಲುವಾಗಿ ಸಮಾನರೂಪದ ಆಧಾರತತ್ವಗಳು ಮತ್ತು ಮಾರ್ಗದರ್ಶಿಸೂತ್ರಗಳನ್ನು ನಿಶ್ಚಿತಗೊಳಿಸುತ್ತದೆ; ಇದರ ವ್ಯಾಪ್ತಿಯೊಳಗೆ ಶಾಲೆಗಳು, ಔದ್ಯೋಗಿಕ ಶಿಕ್ಷಣ ಸಂಸ್ಥೆಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳು ಬರುತ್ತವೆ. ಔದ್ಯೋಗಿಕ ಕೋರ್ಸಿನ ಮೂಲಕ ಗಳಿಸಿದ ಸಾಮರ್ಥ್ಯದ ಮಟ್ಟವನ್ನು ವಸ್ತುನಿಷ್ಠವಾಗಿ ಮೌಲ್ಯಮಾಪನ ಮಾಡಲು, ವಿದ್ಯಾರ್ಥಿಗಳು ಮತ್ತು ಉದ್ಯೋಗದಾತರಂತಹ, ಭಾಗೀದಾರರಿಗೆ (stakeholders) ಅನುವು ಮಾಡಿಕೊಡುವುದು ಇದರ ಗುರಿ. ಅದಷ್ಟೇ ಅಲ್ಲದೆ, ವಿದ್ಯಾರ್ಥಿಗಳು XI ನೇ ತರಗತಿಯ ಬದಲಾಗಿ IX ನೇ ತರಗತಿಯ ಬಳಿಕ ಔದ್ಯೋಗಿಕ ಕೋರ್ಸುಗಳನ್ನು ಆಯ್ಕೆ ಮಾಡಿಕೊಳ್ಳುವುದನ್ನು ಸಾಧ್ಯವಾಗಿಸುವುದು (Department of School Education and Literacy 2011).

*ಕೇಂದ್ರ ಪ್ರಾಯೋಜಿತ ಮಾಧ್ಯಮಿಕ ಶಿಕ್ಷಣದ ಔದ್ಯೋಗಿಕರಣ ಪ್ರಕ್ರಿಯಾ ಯೋಜನೆ*
*Centrally-Sponsored Scheme of Vocationalisation of Secondary Education*

1988 ರಲ್ಲಿ ಪ್ರಾರಂಭಿಸಲ್ಪಟ್ಟ ಈ ಯೋಜನೆಯ ಗುರಿಯೇನೆಂದರೆ, ಉದ್ಯೋಗಾರ್ಹತೆಯನ್ನು ವರ್ಧಿಸುವುದಕ್ಕಾಗಿ ಶೈಕ್ಷಣಿಕ ಅವಕಾಶಗಳನ್ನು ಹೆಚ್ಚಿಸುವುದು, ಕುಶಲ ಮಾನವ ಸಂಪನ್ಮೂಲಗಳ ಬೇಡಿಕೆ ಮತ್ತು ಪೂರೈಕೆಗಳ ನಡುವಿನ ಅಂತರವನ್ನು ಕಡಮೆ ಮಾಡುವುದು ಹಾಗೂ ಶಿಕ್ಷಣದ ಪರ್ಯಾಯ ಜ್ಞಾನಶಾಖೆಯೊಂದನ್ನು ಲಭ್ಯವಾಗಿಸುವುದು. ಈ ಯೋಜನೆಯು X ನೇ ತರಗತಿಯ ನಂತರ, ಸರ್ಕಾರಿ ಮತ್ತು ಸರ್ಕಾರದಿಂದ ಅನುದಾನ ಪಡೆಯುವ ಶಾಲೆಗಳಲ್ಲಿ 2 ವರ್ಷಗಳ ಅವಧಿಯ ಔದ್ಯೋಗಿಕ ಕೋರ್ಸುಗಳನ್ನು ಲಭ್ಯವಾಗಿಸುತ್ತದೆ. ಈ ಕೋರ್ಸುಗಳನ್ನು ನಡೆಸಲು ರಾಜ್ಯಗಳಿಗೆ ಈ ಯೋಜನೆಯು ಆರ್ಥಿಕ ಸಹಾಯವನ್ನು ಒದಗಿಸಿತು. 2011 ರಲ್ಲಿ ಪ್ರಚಲಿತ ಯೋಜನೆಯನ್ನು (a) ಶಾಲೆಗಳಲ್ಲಿ ಔದ್ಯೋಗಿಕ ಶಿಕ್ಷಣವನ್ನು ನೀಡುವುದರಲ್ಲಿ ಕೈಗಾರಿಕಾ ವಲಯದ ಜೊತೆಗಿನ ಪಾಲುದಾರಿಕೆಗಳಿಗೆ ಒತ್ತುನೀಡಲು, (b) ಸಾರ್ವಜನಿಕ-ಖಾಸಗಿ ಪಾಲುದಾರಿಕೆ (PPP) ಮಾದರಿಯ ಅಡಿಯಲ್ಲಿ ಖಾಸಗಿ ಶಾಲೆಗಳಿಗೆ ನೆರವು ನೀಡಲು ಮತ್ತು (c) ಔದ್ಯೋಗಿಕ ಶಿಕ್ಷಕರಲ್ಲಿ ಸಾಮರ್ಥ್ಯವನ್ನು ಹೆಚ್ಚಿಸಲು (Department of School Education and Literacy n.d.) ತಿದ್ದುಪಡಿ ಮಾಡಲಾಯಿತು.[26]

*ಪಾಲಿಟೆಕ್ನಿಕ್ ಗಳಿಗೆ ಸಂಬಂಧಿಸಿದಂತೆ ಸಲ್ಲಿಕೆ*

ಈ ಯೋಜನೆಯ ಅಡಿಯಲ್ಲಿ, ದೇಶದಲ್ಲಿ 1000 ಪಾಲಿಟೆಕ್ನಿಕ್ ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ:

(a) ಕೇಂದ್ರ ಸರ್ಕಾರದಿಂದ ಸಹಾಯ ಪಡೆದು ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳು, ಸೇವಾಲಭ್ಯತೆಯಿಲ್ಲದ ಜಿಲ್ಲೆಗಳಲ್ಲಿ, 300 ಪಾಲಿಟೆಕ್ನಿಕ್ ಗಳನ್ನು ಸ್ಥಾಪಿಸಲಾಗುವುದು.

(b) ಸಾರ್ವಜನಿಕ-ಖಾಸಗಿ ಪಾಲುದಾರಿಕೆ (PPP) ಮೂಲಕ ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳು 300 ಪಾಲಿಟೆಕ್ನಿಕ್ ಗಳನ್ನು ಸ್ಥಾಪಿಸಲಾಗುವುದು(ರಾಜ್ಯ ಸರ್ಕಾರ ಹಾಗೂ ವಿವಿಧ ಕೈಗಾರಿಕಾ ಸಂಘಟನೆಗಳೊಡನೆ ಸಮಾಲೋಚನೆ ನಡೆಸಿ ಪಾಲಿಟೆಕ್ನಿಕ್ ಗಳನ್ನು ಆಯ್ಕೆ ಮಾಡಲಾಗುವುದು; ಅಂತಹ ಕೈಗಾರಿಕಾ ಸಂಘಟನೆಗಳೆಂದರೆ: ಕಾನ್ಫೆಡರೇಶನ್ ಆಫ್ ಇಂಡಿಯನ್ ಇಂಡಸ್ಟ್ರಿ (Confederation of Indian Industry (CII)), ಫೆಡರೇಶನ್ ಆಫ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (Federation of Indian Chambers of Commerce and Industry (FICCI)), ಅಸೋಸಿಯೇಟೆಡ್ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಆಫ್ ಇಂಡಿಯ (Associated Chambers of Commerce and Industry of India (ASSOCHAM)) ಮತ್ತು ಪಿ ಹೆಚ್ ಡಿ ಚೇಂಬರ್ ಆಫ್ ಕಾಮರ್ಸ್ (PHD Chamber of Commerce) ಮುಂತಾದವು; ಮತ್ತು
(c) ಖಾಸಗಿ ಕ್ಷೇತ್ರದಿಂದ 400 ಹೆಚ್ಚುವರಿ ಪಾಲಿಟೆಕ್ನಿಕ್ ಗಳ ಸ್ಥಾಪನೆಯನ್ನು ಸುಗಮಗೊಳಿಸಲಾಗುವುದು. (Department of School Education and Literacy n.d.).

*ರಾಷ್ಟ್ರೀಯ ಕೌಶಲಾಭಿವೃದ್ಧಿ ನಿಯೋಗ*
*National Skill Development Mission (NSDM)*

ವಿವಿಧ ಕ್ಷೇತ್ರಗಳಲ್ಲಿನ ಉದ್ಯೋಗಗಳ ಅಗತ್ಯಕ್ಕೆ ಅನುಗುಣವಾದಂತಹ ಕುಶಲ ಸಿಬ್ಬಂದಿ ಸಮೂಹವನ್ನು ಸಿದ್ಧಗೊಳಿಸುವುದಕ್ಕಾಗಿ NSDM ಅನ್ನು ಆರಂಭಿಸಲಾಯಿತು. NSDM ಅಡಿಯಲ್ಲಿ ಸರ್ಕಾರವು ಮೂರು ಘಟಕಗಳನ್ನು ಹುಟ್ಟುಹಾಕಿತು:

(a) ರಾಷ್ಟ್ರೀಯ ಕೌಶಲಾಭಿವೃದ್ಧಿ ನಿಗಮ (150 ದಶಲಕ್ಷ ಜನರಿಗೆ ತರಬೇತಿಯನ್ನು ಆಯೋಜಿಸಲು, PPP ಆಧಾರದ ಮೇಲೆ ಪ್ರಾರಂಭಿಸಲಾಯಿತು);
(b) ಪ್ರಧಾನ ಮಂತ್ರಿಗಳ ಕೌಶಲಾಭಿವೃದ್ಧಿ ಪರಿಷತ್ತು; ಮತ್ತು
(c) ರಾಷ್ಟ್ರೀಯ ಕೌಶಲಾಭಿವೃದ್ಧಿ ಸಮನ್ವಯ ಮಂಡಳಿ.
ಈ ಉಪಕ್ರಮದ ಮೂಲ ಉದ್ದೇಶವೆಂದರೆ, ದೇಶದ ಕಾರ್ಯಪಡೆಯ ಸಾಮರ್ಥ್ಯದ ಮತ್ತು ವೃತ್ತಿಗಳಿಗೆ ಅಗತ್ಯವಿರುವ ಕುಶಲತೆಗಳ ನಡುವಿನ ಅಂತರಗಳನ್ನು ಬೆಸೆಯುವುದು ಹಾಗೂ ಕಾರ್ಮಿಕ ಕಾರ್ಯಪಡೆಯ ಉದ್ಯೋಗಾರ್ಹತೆಯನ್ನು ಉತ್ತಮಗೊಳಿಸುವುದು (Ministry of Labour and Employment (ಮಿನಿಸ್ಟ್ರಿ ಆಫ್ ಲೇಬರ್ ಆಂಡ್ ಎಂಪ್ಲಾಯ್ಮೆಂಟ್) 2011; PIB 2010).

**ಪ್ರಮುಖ ಸವಾಲುಗಳು**

ಭಾರತದಲ್ಲಿ ಔದ್ಯೋಗಿಕ ಶಿಕ್ಷಣ ಮತ್ತು ತರಬೇತಿಯು ಎದುರಿಸುತ್ತಿರುವ ಹಲಬಗೆಯ ಸವಾಲುಗಳನ್ನು ಈ ಭಾಗದಲ್ಲಿ ಚರ್ಚಿಸಲಾಗುವುದು.

**ಪ್ರವೇಶಾವಕಾಶ ಮತ್ತು ಗುಣಮಟ್ಟ:** IIT/ITC ಗಳ ಸಾಂಸ್ಥಿಕ ಹರವಿನಲ್ಲಿ ತೀವ್ರ ಅಸಮಾನತೆ ಕಾಣುತ್ತದೆ; ಈ ಸಂಸ್ಥೆಗಳಲ್ಲಿ ಅರ್ಧಕ್ಕಿಂತ ಹೆಚ್ಚಿನವು ದಕ್ಷಿಣದ ರಾಜ್ಯಗಳಲ್ಲಿಯೇ ಇವೆ. ಮೂಲಸೌಕರ್ಯದ ಸೌಲಭ್ಯ, ಸಲಕರಣೆ,

ಬೋಧಕವರ್ಗ ಮತ್ತು ಪಠ್ಯಕ್ರಮಗಳ ಗುಣಮಟ್ಟ ನಿರೀಕ್ಷಿತ ಮಟ್ಟದಲ್ಲಿ ಇಲ್ಲದ ಕಾರಣ ನೀಡಲಾಗುತ್ತಿರುವ ತರಬೇತಿಯ ಗುಣಮಟ್ಟ ಕಳಪೆಯಾಗಿದೆ. ಕಲಿಕಾರ್ಥಿಗಳು ಶುಲ್ಕ ಪಾವತಿಸಲಾಗದಿರುವುದು ಹಾಗೂ ಗುಣಮಟ್ಟದ ಅರಿವಿನ ಅಭಾವದಿಂದ ಖಾಸಗಿಯವರು ನಡೆಸುವ ITCಗಳಲ್ಲಿಯೂ ಇಂತಹುದೇ ಸಮಸ್ಯೆಗಳಿವೆ (Planning Commission 2008b).

**ಪ್ರಗತಿಗೆ ಅವಕಾಶದ ಕೊರತೆ:** ಔದ್ಯೋಗಿಕ ಶಿಕ್ಷಣವನ್ನು ಅದು ಸಾಮಾನ್ಯ ಶಿಕ್ಷಣಕ್ಕಿಂತ ವಿಶಿಷ್ಟವಾದದ್ದು ಹಾಗೂ ಅದರಿಂದ ಪ್ರತ್ಯೇಕವಾದದ್ದೆಂದು ಪರಿಗಣಿಸಲಾಗುತ್ತಿದೆ. ಆದ್ದರಿಂದ, ಶಾಲೆಯಲ್ಲಿ ಔದ್ಯೋಗಿಕ ಶಿಕ್ಷಣವನ್ನು ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳು ಸಾಮಾನ್ಯ ಶಿಕ್ಷಣದಲ್ಲಿ ಹೆಚ್ಚಿನ ವಿದ್ಯಾರ್ಹತೆಗಳನ್ನು ಗಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದು ಎರಡು ರೀತಿಯ ಸಮಸ್ಯೆಗಳನ್ನು ಸೃಷ್ಟಿಸುತ್ತದೆ:

(a) ಯಾವುದೇ ಉದ್ಯೋಗಕ್ಕೆ ಒಂದು ಕನಿಷ್ಠ ಮಟ್ಟದ ತಾತ್ವಿಕ ತರಬೇತಿ ಮತ್ತು ಪ್ರಾಯೋಗಿಕ ತರಬೇತಿಗಳೆರಡೂ ಅಗತ್ಯವಿರುವುದರಿಂದ ಇಂತಹ ಕೋರ್ಸುಗಳನ್ನು ಆಯ್ಕೆ ಮಾಡಿಕೊಳ್ಳುವ ಜನರು ಉದ್ಯೋಗ ರಂಗಕ್ಕೆ ಸಿದ್ಧರಾಗಿರುವುದಿಲ್ಲ; ಹಾಗೂ
(b) ಹೆಚ್ಚಿನ ವಿದ್ಯಾರ್ಹತೆ ಪಡೆಯಲು ವಿದ್ಯಾರ್ಥಿಗಳಿಗಿರುವ ನಿರ್ಬಂಧಿತ ಪ್ರವೇಶಾವಕಾಶದಿಂದಾಗಿ ಈ ಕೋರ್ಸುಗಳು ಪ್ರಗತಿಗೆ ಅವಕಾಶವೀಯದವು ಎಂದು ಪರಿಗಣಿಸಲ್ಪಟ್ಟಿವೆ (Ministry of Labour and Employment 2011).

**ಕೈಗಾರಿಕೆ ಮತ್ತು ಉದ್ಯೋಗ ಸಂಪರ್ಕಕೊಂಡಿಗಳು:** ಔದ್ಯೋಗಿಕ ತರಬೇತಿ ಸಂಸ್ಥೆಗಳು ಉದ್ಯೋಗದಾತರ ಜೊತೆಗೆ ನಿಕಟ ಸಂಪರ್ಕಕೊಂಡಿಗಳನ್ನು ಹೊಂದಿಲ್ಲವಾದ್ದರಿಂದ ನೀಡಲಾಗುತ್ತಿರುವ ತರಬೇತಿ ಹಳೆಯ ಕಾಲದ್ದು ಮತ್ತು ಅಪ್ರಸ್ತುತ. ಪಠ್ಯಕ್ರಮವು ಅನೇಕ ವೇಳೆ ವರ್ಷಾನುಗಟ್ಟಲೆ ಬದಲಾಗದೆ ಇರುತ್ತದೆ, ಹಾಗೂ ಸೌಲಭ್ಯಗಳು ಮತ್ತು ಪ್ರಯೋಗಶಾಲೆಗಳು ಅನೇಕವೇಳೆ ಹಳೆಯ ಕಾಲದವಾಗಿರುತ್ತವೆ (ibid.).

**ಸಮಿತಿಗಳ ಪ್ರಮುಖ ಶಿಫಾರಸುಗಳು**

ಯೋಜನಾ ಆಯೋಗವು, ತನ್ನ 11ನೇ ಪಂಚವಾರ್ಷಿಕ ಯೋಜನೆಯಲ್ಲಿ, ಅಸ್ತಿತ್ವದಲ್ಲಿರುವ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೆ ಏರಿಸುವ ಹಾಗೂ ಔದ್ಯೋಗಿಕ ತರಬೇತಿಗಾಗಿ ಹೊಸ ಸಂಸ್ಥೆಗಳನ್ನು ಆರಂಭಿಸುವ ಕಡೆಗೆ ಗಮನ ಕೇಂದ್ರೀಕರಿಸಿತು (Planning Commission 2008b). 12ನೇ ಪಂಚವಾರ್ಷಿಕ ಯೋಜನೆಯ ಔದ್ಯೋಗಿಕ ಶಿಕ್ಷಣದ ಕಾರ್ಯಪಡೆಯು (working group) ಕೆಲವು ನಿರ್ದಿಷ್ಟ ಶಿಫಾರಸುಗಳನ್ನು ಮಾಡಿತು (Ministry of Labour and Employment 2011):

(a) ಯೋಜನೆಗಾಗಿ ಮಾನವ ಸಂಪನ್ಮೂಲಗಳ ನಿರ್ಧಾರಣವು ಅತ್ಯಗತ್ಯ. ಆದ್ದರಿಂದ, ಅಂತಹ ಅಂದಾಜುಗಳನ್ನು ರಾಷ್ಟ್ರೀಯ ಕೌಶಲಾಭಿವೃದ್ಧಿ ನಿಗಮದಿಂದ ನಿಯೋಜಿತವಾಗುವ ಆಯಾ ವಲಯಗಳ ಕೌಶಲ ಪರಿಷತ್ತುಗಳಿಂದ ಪಡೆದುಕೊಳ್ಳಬೇಕು.
(b) ಶಾಲೆಗಳನ್ನು ಮತ್ತು ಔದ್ಯೋಗಿಕ ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡುವಾಗ - ಕೌಶಲದ ಬೇಡಿಕೆಗಳು, ಶಿಕ್ಷಕರು/ ತರಬೇತುದಾರರ ಲಭ್ಯತೆ, ಅವಶ್ಯಕ ಕಚ್ಚಾವಸ್ತು, ವಿದ್ಯುಚ್ಛಕ್ತಿ, ನೀರಿನ ಪೂರೈಕೆಗಳಂತಹ ಅಗತ್ಯ

ಸಂಪನ್ಮೂಲಗಳ ಲಭ್ಯತೆ, ಹಾಗೂ ಉದ್ಯೋಗಾವಕಾಶಗಳು - ಇವುಗಳ ನಿರ್ಧಾರಣೆಯ ಮೇಲೆ ಆಧಾರಿತವಾಗಿರಬೇಕು.

(c) ಶಿಕ್ಷಣ ಮತ್ತು ಕೈಗಾರಿಕಾ ತಜ್ಞರು ಒದಗಿಸುವ ಸಂಭಾರಗಳನ್ನು ಬಳಸಿಕೊಂಡು ಪಠ್ಯಕ್ರಮಗಳನ್ನು ರಚಿಸಬೇಕು ಹಾಗೂ ಪ್ರತಿ ಎರಡು ಮೂರು ವರ್ಷಗಳಿಗೊಮ್ಮೆ ಅಥವಾ ಅದಕ್ಕಿಂತ ಮೊದಲೇ, ಅವುಗಳನ್ನು ಪರಿಶೀಲಿಸಬೇಕು ಮತ್ತು ಪರಿಷ್ಕರಿಸಬೇಕು.

(d) ಶಿಕ್ಷಕರ ತರಬೇತಿ ಕೋರ್ಸುಗಳು ಔದ್ಯೋಗಿಕ ಶಿಕ್ಷಣದ ಮೇಲೆ ಒಂದು ಪ್ರತ್ಯೇಕ ವಿಷಯವನ್ನು ಒಳಗೊಂಡಿರಬೇಕು.

(e) ಸುಲಭ ಮತ್ತು ಮೂಲ ತಾಂತ್ರಿಕ ಕೌಶಲಗಳ ಅಭಿವೃದ್ಧಿಯ ಸಲುವಾಗಿ ಸಮರ್ಪಕವಾದ ಉಪಕರಣಗಳು, ಸಲಕರಣೆಗಳು ಮತ್ತು ಯಂತ್ರೋಪಕರಣಗಳನ್ನು ಶಾಲೆಗಳಿಗೆ ಒದಗಿಸಬೇಕು.

(f) ಪ್ರತಿ ಶಾಲೆಯೂ ಕೈಗಾರಿಕಾ ಅಥವಾ ವ್ಯಾವಹಾರಿಕ ಸಂಸ್ಥೆಗಳ ಜೊತೆಗೆ ಸಂಪರ್ಕಕೊಂಡಿಗಳನ್ನು ಹೊಂದಿರಬೇಕು. ಈ ಸಂಸ್ಥೆಗಳಲ್ಲಿ ವಿಶೇಷೀಕೃತ ಪ್ರಾಯೋಗಿಕ ತರಬೇತಿಗಳನ್ನು ಏರ್ಪಡಿಸಬಹುದು.

(g) ವಿವಿಧ ಹಂತಗಳಲ್ಲಿ NVEQF ಅನ್ನು ಅನುಷ್ಠಾನಗೊಳಿಸಲು ಮತ್ತು ಮೇಲ್ವಿಚಾರಣೆ ನಡೆಸಲು ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಒಂದು ಪ್ರತ್ಯೇಕ ವ್ಯವಸ್ಥಾಪನಾ ಸಂರಚನೆಯನ್ನು ಸ್ಥಾಪಿಸಬೇಕು.

(h) ಸರ್ಕಾರೇತರ ಸಂಸ್ಥೆಗಳು ಮತ್ತು ಸ್ಥಳೀಯ ಸರ್ಕಾರಿ ಘಟಕಗಳ ಜೊತೆಜೊತೆಗೆ ಖಾಸಗಿ ಕ್ಷೇತ್ರವನ್ನು PPP ಮಾದರಿಯಲ್ಲಿ ಶೈಕ್ಷಣಿಕ ಹಾಗೂ ಕೈಗಾರಿಕಾ ಪಾಲುದಾರರನ್ನಾಗಿ ತೊಡಗಿಸಿಕೊಳ್ಳಬೇಕಾಗಿದೆ.

NKC ಸಹ ಔದ್ಯೋಗಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಶಿಫಾರಸ್ಸುಗಳನ್ನು ಮಾಡಿದೆ (NKC 2009):

(a) ಔದ್ಯೋಗಿಕ ಶಿಕ್ಷಣವನ್ನು ಇಡಿಯಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಅಧೀನದಲ್ಲಿ ಇರಿಸಬೇಕು (ಈಗ ಈ ವಲಯದ ನಿರ್ವಹಣೆ ವಿಭಾಗಗೊಂಡಿದೆ; ಅಂದರೆ ಅದು ಹಲವು ಸಚಿವಾಲಯಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ).

(b) ಔದ್ಯೋಗಿಕ ಶಿಕ್ಷಣದ ವ್ಯಾಪ್ತಿಯೊಳಗೇ ಸಾಮಾನ್ಯ ಶಿಕ್ಷಣದ ಅಂಶಗಳನ್ನು ಉಳಿಸಿಕೊಳ್ಳಬೇಕು. ಇದು ತದನಂತರದ ಘಟ್ಟದಲ್ಲಿ ಶಿಕ್ಷಣದ ಮುಖ್ಯವಾಹಿನಿಗೆ ಮರಳಲು ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡುತ್ತದೆ.

(c) ವಿದ್ಯಾರ್ಥಿಗಳಿಗೆ ಔದ್ಯೋಗಿಕ ಶಿಕ್ಷಣ ಶಾಖೆಯಲ್ಲಿ ಹಲವು ಬಾರಿ ಪ್ರವೇಶದ ಹಾಗೂ ನಿರ್ಗಮನದ ಆಯ್ಕೆಗಳನ್ನು ಮಾಡಿಕೊಳ್ಳಲು ಅನುಮತಿಸಬೇಕು.

(d) ಔದ್ಯೋಗಿಕ ಶಿಕ್ಷಣ ಮತ್ತು ಶಾಲೆ ಹಾಗೂ ಉನ್ನತ ಶಿಕ್ಷಣಗಳ ನಡುವೆ ಕೊಂಡಿಗಳನ್ನು ಸ್ಥಾಪಿಸಬೇಕು.

(e) ಉದ್ಯೋಗಾರ್ಹತೆಯ ಮೇಲೆ ತರಬೇತಿ ಬೀರುವ ಪ್ರಭಾವವನ್ನು ನಿರ್ಣಯಿಸಲು ಕಾಲಕಾಲಕ್ಕೆ ಅಂಕಿಅಂಶಗಳನ್ನು ಸಂಗ್ರಹಿಸಬೇಕು.

(f) ಸರ್ಕಾರವು ತನ್ನ ಒಟ್ಟು ಸಾರ್ವಜನಿಕ ವೆಚ್ಚದ ಕನಿಷ್ಠ ಪಕ್ಷ ಶೇಕಡ 10-15ರಷ್ಟನ್ನು ಔದ್ಯೋಗಿಕ ಶಿಕ್ಷಣದ ಸಲುವಾಗಿ ವೆಚ್ಚಮಾಡುವ ಗುರಿ ಹೊಂದಿರಬೇಕು.

(g) ಕುಶಲ ಕಾರ್ಮಿಕರಿಗೆ ಇರುವ ಬೇಡಿಕೆಯನ್ನು ಪೂರೈಸಲು ತರಬೇತಿಯ ಪರಿಮಾಣದಲ್ಲಿ ಅಗಾಧ ಹೆಚ್ಚಳದ ಅವಶ್ಯಕತೆಯಿದೆ. ಸರ್ಕಾರವು PPP ಮಾದರಿಗಳು, ದೂರಶಿಕ್ಷಣ ಮತ್ತು ಗಣಕೀಕೃತ ಔದ್ಯೋಗಿಕ ತರಬೇತಿಗಳಂತಹ ಅವಕಾಶಗಳನ್ನು ಪರಿಗಣಿಸಬಹುದು.

(h) ಗುಣಮಟ್ಟ ಮಾಪನದ ಸಲುವಾಗಿ, ಎಲ್ಲ ಸಾರ್ವಜನಿಕ ಮತ್ತು ಖಾಸಗಿ ಔದ್ಯೋಗಿಕ ಸಂಸ್ಥೆಗಳೂ ಅನುಸರಿಸಬೇಕಾದ ಕನಿಷ್ಠ ಪ್ರಮಾಣದ ಮಾನದಂಡಗಳನ್ನು ಜಾರಿಗೆ ತರಬೇಕು.

(i) ಅಸಂಘಟಿತ ಮತ್ತು ಅನೌಪಚಾರಿಕ ವಲಯದವರಿಗಾಗಿ ತರಬೇತಿಯ ಅವಕಾಶಗಳನ್ನು ವೃದ್ಧಿಗೊಳಿಸಬೇಕು.

(j) ಔದ್ಯೋಗಿಕ ಶಿಕ್ಷಣ ಮತ್ತು ತರಬೇತಿಗಾಗಿ ಸ್ವತಂತ್ರ ನಿಯಂತ್ರಣಾ ನಿಯೋಗವನ್ನು ಆರಂಭಿಸಬೇಕು. ಈ ಘಟಕವು ಮಾನ್ಯತಾ ನಿಯೋಗಗಳಿಗೆ ಪರವಾನಗಿ ನೀಡುವುದು ಹಾಗೂ ಪ್ರಮಾಣೀಕರಣಕ್ಕಾಗಿ ಮಾನದಂಡಗಳನ್ನು ಸೂಚಿಸುವುದು.

(k) ಪ್ರಮಾಣೀಕರಣವನ್ನು ಉದ್ಯೋಗದಾತರು ಪರಿಗಣಿಸುವುದನ್ನು ಖಾತರಿಪಡಿಸುವ ಸಲುವಾಗಿ ಪ್ರಮಾಣೀಕರಣಗೊಂಡ ತರಬೇತಿ ಸಂಘಟಕರ ವಿದ್ಯುನ್ಮಾನ ದತ್ತಾಧಾರದ (electronic database) ಜೊತೆಗೆ ಪ್ರಮಾಣೀಕೃತ ಕಾರ್ಮಿಕರನ್ನು ವಿದ್ಯುನ್ಮಾನವಾಗಿ ಗುರುತಿಸುವುದನ್ನು ಬಳಕೆಗೆ ತರಬೇಕು.

## ಮುಕ್ತಾಯದ ಟಿಪ್ಪಣಿಗಳು

ತನ್ನ ಜನಸಂಖ್ಯೆಯ ಬಹಳಷ್ಟು ಪಾಲು, ಸಾಪೇಕ್ಷವಾಗಿ, 20-35 ವರ್ಷಗಳ ವಯೋಮಾನದ ಯುವಜನರಿಂದ ಕೂಡಿರುವಂತಹ ಆರ್ಥಿಕತೆಯ ಕಡೆಗೆ ಭಾರತವು ಮುಂದಡಿ ಇಡುತ್ತಿದೆ. ಈ 'ಜನಸಂಖ್ಯಾ ಲಾಭಾಂಶ'ವು (demographic dividend) ಭಾರತಕ್ಕೆ ಮಹತ್ತರ ಸದವಕಾಶಗಳನ್ನು ಒದಗಿಸುತ್ತದೆಯಾದರೂ, ಭಾರಿ ಸವಾಲನ್ನೂ ಒಡ್ಡುತ್ತದೆ. ತನ್ನ ಜನಸಮುದಾಯದ ಸದಸ್ಯರು ಆರೋಗ್ಯಪೂರ್ಣರೂ, ವಿದ್ಯಾವಂತರೂ, ಮತ್ತು ಸೂಕ್ತವಾಗಿ ಕೌಶಲಪೂರ್ಣರೂ ಆಗಿದ್ದರೆ ಮಾತ್ರ ಭಾರತವು ಇಂತಹ ಲಾಭಾಂಶದ ಅನುಕೂಲಗಳನ್ನು ಅನುಭವಿಸಲು ಸಾಧ್ಯವಾಗುತ್ತದೆ. ಈ ಅಧ್ಯಾಯವು ಶಿಕ್ಷಣ ಕ್ಷೇತ್ರದ ನಿಯಂತ್ರಣದ ಮೇಲೆ ಗಮನ ಕೇಂದ್ರೀಕರಿಸಿದೆ ಹಾಗೂ ಭಾರತವು ಎಲ್ಲಾ ಹಂತಗಳಲ್ಲಿಯೂ ಜಾಗತಿಕ ಗುಣಮಟ್ಟದ ಶಿಕ್ಷಣ ವ್ಯವಸ್ಥೆಯನ್ನು ಹೊಂದಬೇಕಾದರೆ ಅದು ಬಗೆಹರಿಸಿಕೊಳ್ಳಬೇಕಾದ ಸವಾಲುಗಳನ್ನು ವಿಶ್ಲೇಷಿಸಿದೆ.

ಭಾರತವು ಜಾಗತಿಕವಾಗಿ ಸಮರ್ಥ ದೇಶವಾಗಿ ಹೊರಹೊಮ್ಮುವುದಕ್ಕೆ ಬೇಕಾದ ಸಾಮರ್ಥ್ಯವು ಹೆಚ್ಚಿನ ಮಟ್ಟಿಗೆ ಅದು ಹೊಂದಿರುವ ಜ್ಞಾನ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿದೆ. ಪ್ರಸ್ತುತ, ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಬಲ್ಲ ಸಂಸ್ಥೆಗಳ ಸಂಖ್ಯೆ ಅತಿ ಕಡಮೆ ಇರುವುದಾದರೆ ಬಹುಪಾಲು ಸಂಸ್ಥೆಗಳು ಗುಣಮಟ್ಟ, ಅವಕಾಶ ಲಭ್ಯತೆ ಮತ್ತು ನ್ಯಾಯಪರತೆಗಳ ವಿಷಯದಲ್ಲಿ ಗಣನೀಯ ಸುಧಾರಣೆಗಳನ್ನು ಮಾಡಿಕೊಳ್ಳುವ ಅಗತ್ಯವಿದೆ. RTE ಕಾಯ್ದೆ, ಉನ್ನತ ಶಿಕ್ಷಣ ನಿಯಂತ್ರಣದ ಸುಧಾರಣೆಗಾಗಿ ಹಲವಾರು ಮಸೂದೆಗಳು ಮತ್ತು ಔದ್ಯೋಗಿಕ ಶಿಕ್ಷಣಕ್ಕೆ ಸಂಬಂಧಿಸಿದ ಯೋಜನೆಗಳೂ ಸೇರಿದಂತೆ ಶಿಕ್ಷಣಕ್ಷೇತ್ರದ ಸುಧಾರಣೆಗಾಗಿ ಇತ್ತೀಚೆಗೆ ಕೆಲವು ಆರಂಭಿಕ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಆದಾಗ್ಯೂ, ಈ ಕಾರ್ಯಗಳಲ್ಲಿ ಹೆಚ್ಚಿನವು ಶಿಕ್ಷಣದ ಗುಣಮಟ್ಟ ಮತ್ತು ಅವಕಾಶ ಲಭ್ಯತೆ ಹಾಗೂ ಕ್ಷೇತ್ರದ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಸಂಪೂರ್ಣ ಗಮನ ಹರಿಸುವುದಿಲ್ಲ. ಅವು ಶಿಕ್ಷಣವನ್ನು ಲಭ್ಯವಾಗಿಸುವಲ್ಲಿ ಖಾಸಗಿ ಕ್ಷೇತ್ರದ ಭಾಗವಹಿಸುವಿಕೆಯನ್ನು ಸಹ ಉತ್ತೇಜಿಸುವುದಿಲ್ಲ. ವ್ಯವಸ್ಥಿತ ಪರಿವರ್ತನೆ ತರುವ ಸಲುವಾಗಿ, ಶಿಕ್ಷಣ ಕ್ಷೇತ್ರದ ನಿಯಂತ್ರಣಾ ರೂಪುರೇಷೆಯಲ್ಲಿ ಅಂತರ್ನಿಹಿತವಾಗಿರುವ ಅನೇಕ ದೌರ್ಬಲ್ಯಗಳು ಮತ್ತು

ಅಸಮಂಜಸತೆಗಳನ್ನು ಪರಿಹರಿಸುವ ಕಡೆಗೆ ಗಮನ ಕೊಡಬೇಕಾಗುತ್ತದೆ. ಕ್ಷೇತ್ರದ ಸುಧಾರಣೆಯ ಮಾರ್ಗಸೂಚಿಯು, ಜ್ಞಾನ ಗಳಿಸುವ ಅವಕಾಶ ಲಭ್ಯತೆಯನ್ನು ವೃದ್ಧಿಸುವ, ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ, ಪ್ರಸ್ತುತಪಡಿಸುವ ವ್ಯವಸ್ಥೆಯನ್ನು ಸುಧಾರಿಸುವ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಯ ಹಂದರಗಳನ್ನು ಮರುರೂಪಿಸುವ ಕಡೆಗೆ ಗಮನವನ್ನು ಕೇಂದ್ರೀಕರಿಸುವ ಅಗತ್ಯವಿದೆ.

**ಅನುವಾದ: ಎಸ್ ಸಿ ಶ್ರೀನಿವಾಸ,**
**ಚೈತನ್ಯ ಅಸೋಸಿಯೇಟ್ಸ್, ಮೈಸೂರು**

**Notes**

1. *Census of India*, 2011.
2. Supreme Court cases such as the 1993 *Unnikrishnan* case, the 2002 *T.M.A. Pai Foundation* case, the 2003 *Islamic Academy of Education* case, and the 2005 *P. A. Inamdar* case.
3. *T.M.A. Pai Foundation & Ors v. State of Karnataka & Ors*, Writ Petitions (C) No. 317 of 1993, 25 November 2002.
4. *Islamic Academy of Education & Anr v. State of Karnataka & Ors* (2003) 6 SCC 697.
5. Supreme Court cases such as the 1993 *Unnikrishnan* case, the 2002 *T.M.A. Pai Foundation* case, the 2003 *Islamic Academy of Education* case, and the 2005 *P.A. Inamdar* case (see Agarwal 2006).
6. Also see 'Access to Higher Education', Unstarred Question no. 5404, Lok Sabha, answered on 9 May 2012.
7. Delhi Schools Education Act, 1973.
8. Article 45, Part IV, Directive Principles of State Policy. http://sec.up.nic.in/acts_rules/coi_english/Part_4.pdf (accessed 8 October 2012).
9. Rule 15, Gujarat Right of Children to Free and Compulsory Education Rules, 2012 (notified on 18 February 2012).
10. Unstarred Question no. 4479, Lok Sabha, answered on 21 December 2011.
11. Ibid.
12. Unstarred Question no. 5582, Lok Sabha, answered on 7 September 2011.
13. Starred Question no. 292, Lok Sabha, answered on 9 December 2009.
14. Unstarred Question no. 278, Lok Sabha, answered on 14 March 2012.
15. Seventh Schedule, Constitution of India.
16. UGC Act, 1956; AICTE Act, 1987.
17. Ibid.
18. Section 12A, University Grants Commission Act, 1956.
19. *Prof. Yash Pal v. State of Chhattisgarh & Ors*, Writ Petition (C) No. 19 of 2004.
20. *P.A. Inamdar & Ors v. State of Maharashtra & Ors*, Appeal (civil) 5041 of 2005, Supreme Court, 12 August 2005.
21. Unstarred Question no. 560, Lok Sabha, answered on 3 August 2011.

22. Unstarred Question no. 3999, Lok Sabha, answered on 19 December 2011.
23. Unstarred Question no. 1334, Lok Sabha, answered on 21 March 2012; Unstarred Question no. 1557, Lok Sabha, answered on 30 November 2011.
24. Unstarred Question no. 1557, Lok Sabha, answered on 30 November 2011.
25. Starred Question no. 364, Lok Sabha, answered on 2 May 2012; Unstarred Question no. 7217, Lok Sabha, answered on 21 May 2012.
26. Unstarred Question no. 1557, Lok Sabha, answered on 30 November 2011.

**References**


Agarwal, Pawan. 2006. 'Higher Education in India: The Need for Change'. Working Paper no. 108, Indian Council for Research on International Economic Relations, June.

All India Council for Technical Education (AICTE). 2005. 'Regulations for Entry and Operation of Foreign Universities/Institutions Imparting Technical Education in India'. Notification, All India Council for Technical Education, 16 May.

——————. 2012. 'Approval Process Handbook 2012–2013'. All India Council for Technical Education.

Ashar, Sandeep and Shreya Bhandary. 2011. 'State Assembly Clears Bill on Fee Regulation'. *Times of India*, 4 August.

Basu, Kaushik. 2009. 'Report of the Committee to Advise on Renovation and Rejuvenation of Higher Education in India: A Note of Dissent'. 6 July. http://prayatna.typepad.com/education/2009/07/full-text-of-kaushik-basus-dissent-note-to-the-yashpal-committee-report.html (accessed 10 October 2012).

*Business Standard*. 2012. 'Raj Govt to Issue Ordinance on Fee Regulatory Commission', 30 May.

Central Advisory Board of Education (CABE). 2005. 'Universalisation of Secondary Education'. Report of the Central Advisory Board of Education Committee.

Chakrabarty, K. C. 2011. 'Indian Education System: Issues and Challenges'. Address, JRE.

School of Management, 5 August, Greater Noida. http://www.bis.org/review/r110809b.pdf (accessed 8 October 2012).

Chattopadhyay, Saumen. 2009. 'The Market in Higher Education: Concern for Equity and Quality', *Economic and Political Weekly*, 44(29): 53–61.

Chowdhury, Kavita. 2010. 'Foreign Univ Bill Divides Academics'. *India Today*, 18 May.

Debroy, Bibek. 2008. 'Higher Education in India: Ducking the Answers', *ISAS Insights*, 32, 16 May.

*Deccan Chronicle*. 2012. 'AP Plans to Adopt TN Model to Fix Fee', 5 March.

Department of School Education and Literacy. n.d.'Vocational Education'. Department of School Education and Literacy, Ministry of Human Resource Development, Government of India. http://mhrd.gov.in/voc_eduu (accessed 11 October 2012).

——————. 2011. 'Working Group Report on Secondary and Vocational Education: 12th Five Year Plan (2012–2017)'. Department of School Education and Literacy, Ministry of Human Resource Development, Government of India, October.

Government of India (GoI). n.d.'Sarva Shiksha Abhiyan…Education for All'. http://india.gov.in/spotlight/spotlight_archive.php?id=31 (accessed 12 October 2012).

——————. 2006. '172nd Report on University and Higher Education', Department-Related Parliamentary Standing Committee on Human Resource Development, May. http://164.100.47.5/newcommittee/reports/EnglishCommittees/Committee%20on%20HRD/172ndreport.htm (accessed 10 October 2012).

Government of India (GoI). 2011. '237th Report on the Foreign Educational Institutions (Regulation of Entry and Operations) Bill, 2010', Department-Related Parliamentary Standing Committee on Human Resource Development, August.
http://www.prsindia.org/uploads/media/Foreign%20Educational%20Institutions%20Regulation/Foreign%20Universities%20Bill%20_SCR.pdf (accessed 10 October 2012).

——————. 2012. 'Human Development', in *Economic Survey 2011–12*, pp. 301–36. New Delhi: Oxford University Press.

*Indian Express*. 2010. 'Top Educational Institutions Hail Foreign Varsity Bill', 16 March.

Institute of Chartered Accountants of India (ICAI). 2010. *Technical Guide on Internal Audit of Educational Institutions*. New Delhi: Institute of Chartered Accountants of India.

Jayashankar, Mitu. 2010. 'The Business of Schools'. *Forbes India*, 8 April.

Juneja, Nalini. 2003. 'Constitutional Amendment to Make Education a Fundamental Right: Issues for a Follow-up Legislation'. Occasional Paper, National Institute of Education Planning and Administration, March.

Kapur, Devesh and Bhanu Pratap Mehta. 2004. 'Indian Higher Education Reform: From Half-Baked Socialism to Half-Baked Capitalism'. Working Paper no. 108, Centre for International Development, Harvard University, September.

Mehta, Pratap Bhanu. 2005. 'Regulating Higher Education'. *Indian Express*, 14 July.

——————. 2012. 'Classroom Struggle'. *Indian Express*, 18 April.

Ministry of Human Resource Development (MHRD). n.d.'Institutions of National Importance'. http://mhrd.gov.in/institutions_imp (accessed 12 October 2012).

——————. 2009a. 'Report of the Committee for Review of Existing Institutions Deemed to be Universities (2009)'. Ministry of Human Resource Development, Government of India, 19 October. http://mhrd.gov.in/sites/upload_files/mhrd/files/RepoRevCom-DmdUniv.pdf (accessed 10 October 2012).

——————. 2009b. ‘Report of the Committee to Advise on Renovation and Rejuvenation of Higher Education’. http://www.academics-india.com/Yashpal-committee-report.pdf (accessed 10 October 2012).

——————. 2011a. ‘All India Survey on Higher Education: Pilot Report’. Planning, Monitoring & Statistics Bureau, Department of Higher Education, Ministry of Human Resource Development, Government of India.

——————. 2011b. *Annual Report 2010–11*. New Delhi: Department of School Education & Literacy and Department of Higher Education, Ministry of Human Resource Development, Government of India.

——————. 2011c. ‘Consolidated Working Group Report of the Department of Higher Education for XII Five Year Plan on Higher Education, Technical Education and Private Sector Participation including PPP in Higher Education’. Department of Higher Education, Ministry of Human Resource Development, Government of India.

——————. 2011d. ‘Statistics of School Education, 2009–10 (Provisional)’. Bureau of Planning, Monitoring and Statistics, Ministry of Human Resource Development, Government of India.

——————. 2012. ‘Report to the People on Education 2010–11’. Ministry of Human Resource Development, Government of India, March.

Ministry of Labour and Employment. 2011. ‘Report of the Working Group on Skill Development and Training: 12th Five Year Plan (2012–2017)’. Ministry of Labour and Employment, Government of India.

National Bureau of Statistics (NBS) of China. 2007. *China Statistical Yearbook 2007*. Beijing: China Statistics Press.

National Center for Education Statistics (NCES). 2010. *The Condition of Education 2010*. Washington, DC: National Center for Education Statistics, Institute for Education Sciences, US Department of Education. http://nces.ed.gov/pubs2010/20100 28.pdf (accessed 10 October 2012).

National Knowledge Commission (NKC). 2007. *Recommendations on School Education*. New Delhi: National Knowledge Commission, Government of India.

——————. 2009. *Report to the Nation 2006–2009*. New Delhi: National Knowledge Commission, Government of India.

National University of Educational Planning and Administration (NUEPA). 2009. ‘Elementary Education in India: Progress towards UEE — Flash Statistics 2007–08’. District Information System for Education, National University of Educational Planning and Administration.

——————. 2010. ‘Teacher-Related Indicators’, in *Elementary Education in India: Progress towards UEE*, pp. 151–90. New Delhi: National University of Educational Planning and Administration.

Palit, Amitendu. 2009. ‘Let’s Get Technical’. *Financial Express*, 26 December.

Planning Commission. 2008a. ‘Education’, in *Eleventh Five Year Plan (2007–2012): Social Sector*, pp. 1–40. New Delhi: Oxford University Press.

——————. 2008b. ‘Skill Development and Training’, in *Eleventh Five Year Plan (2007–2012): Inclusive Growth*, pp. 87–100. New Delhi: Oxford University Press.

Press Information Bureau (PIB). 2010. ‘National Skill Development Mission’. Press Information Bureau, Ministry of Human Resource Development, Government of India, 16 August.

——————. 2011. ‘The Right of Children to Free and Compulsory Education Act, 2009: Progress as on 1st April, 2011’. Press Information Bureau, Ministry of Human Resource Development, Government of India, 1 April.

——————. 2012a. ‘National Policy on Skill Development’. Press Information Bureau, Ministry of Human Resource Development, Government of India, 21 March 2012. http://labour.nic.in/pib/PressRelease/RS/NationalPolocyonSkillDevelopment.pdf (accessed 12 October 2012).

——————. 2012b. ‘Second Anniversary of RTE: Some Highlights’. Press Information Bureau, Ministry of Human Resource Development, Government of India, 2 April.

Rahman, Shafi . 2010. ‘Degrees of Debate’. *India Today*, 1 May.

Schukoske, Jane E. 2006. ‘Bringing Foreign Universities to India’. *Hindu*, 14 November.

*Times Higher Education*. 2012. ‘Times Higher Education — QS World University Rankings 2011–12’. http://www.timeshighereducation.co.uk/world-university-rankings/2011-12/world-ranking (accessed 10 October 2012).

Vora, Nikhil and Shweta Dewan. 2009. ‘Indian Education Sector: Long Way from Graduation’. Sector Report, IDFC-SSKI Securities Ltd, Mumbai, 16 January.

World Bank. 2009. *Secondary Education in India*: *Universalizing Opportunity*. Washington, DC: World Bank.